
# ಅಪರಂಜಿ

ತಿಳಿನಗೆಯ ಕಾರಂಜಿ



ಆಗಸ್ಟ್ - 2012





# ಅಪರಂಜಿ



ತಿಳಿನಗೆಯ ಕಾರಂಜಿ



ಸಂಪಾದಕ ಮಂಡಳಿ

**ಸಂಪಾದಕರು**
ಶ್ರೀ ಎಂ. ಶಿವಕುಮಾರ್

**ಉಪ ಸಂಪಾದಕರು**
ಶ್ರೀ ಬೇಲೂರು ರಾಮಮೂರ್ತಿ

**ಸದಸ್ಯರು**
ಶ್ರೀ ಎಚ್.ಎನ್. ಆನಂದ
ಶ್ರೀ ಎಚ್. ಗೋಪಾಲಕೃಷ್ಣ

**ಟ್ರಸ್ಟಿಗಳು**
ಶ್ರೀ ಎಂ. ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ಜಿ. ನಾಗೇಶ್
ಶ್ರೀ ವಿ.ಆರ್. ನಾಥ್
ಶ್ರೀ ಎ.ಆರ್. ರಾಜಗೋಪಾಲ್
ಶ್ರೀ ಕೆ. ರವೀಂದ್ರ ರಾವ್

**ವಿಶೇಷ ಆಹ್ವಾನಿತರು**
ಶ್ರೀ ಆರ್. ಶೇಷಗಿರಿರಾವ್
ಶ್ರೀ ಆರ್.ಎಸ್. ಪ್ರಶಾಂತ್

**ಗೌರವ ಸಲಹೆಗಾರರು**
ಶ್ರೀ ಅ.ರಾ.ಸೇ.



**ಚಂದಾ ವಿವರ:**
ಬಿಡಿ ಪ್ರತಿ: ರೂ. 10/-
ವಾರ್ಷಿಕ ಚಂದಾ: ರೂ. 100/-
ಹತ್ತು ವರ್ಷದ ಚಂದಾ: ರೂ. 750/-

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ





ಸಂಪುಟ 29
ಸಂಚಿಕೆ - 11
ಆಗಸ್ಟ್ - 2012


## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | **ಪ್ರಕಾಶ್** | 2 |
| ಲಂಡನ್ ಒಲಂಪಿಕ್ಸ್ | **ವತ್ಸನ** | 3 |
| ಎಲ್ಲಿ ಕಳಕೊಂಡವಿ ಆ.... | **ಭೂಮಿತಾಯಿ** | 8 |
| ಅಂದು ಮಾತ್ರ ಫುಲ್... | **ಅನಿತಾ ನರೇಶ್ ಮಂಚಿ** | 12 |
| ಭಾರತ 65, ಫುಲ್... | **ಇ.ಆರ್. ರಾಮಚಂದ್ರನ್** | 15 |
| ತುಂತುರು | **ದಂನಾಅ** | 18 |
| ಜಲಿಯನ್ ವಾಲಾ.... | **ಸಿ.ಆರ್. ಸತ್ಯ** | 23 |
| ರಿಲೇ - ಸುತ್ತಮುತ್ತ | **ಕೃಷ್ಣ ಸುಬ್ಬರಾವ್** | 27 |
| ಹಾಲಿವುಡ್ ಮೂವಿ... | **ಶ್ರೀನಿವಾಸ ಕುಂದಂತಾಯ** | 30 |
| ಹುರುಳಿಕಟ್ಟು | **ಎಚ್. ಗೋಪಾಲಕೃಷ್ಣ** | 34 |
| ಸಿದ್ಧತೆ | **ಸೂರಿ ಹಾರ್ದಳ್ಳಿ** | 38 |



*ಮುದ್ರಣ : ರವಿ ಗ್ರಾಫಿಕ್ಸ್ - ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*
ಪ್ರಕಾಶಕರು : ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು - 560 003. email: aparanji@hotmail.com



ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು - 560 068. ದೂರವಾಣಿ: 080-26688488. email: belururamamurthy@gmail.com

# ಅಪರಂಜಿ ಕಿಡಿ

● ಪ್ರಕಾಶ್



ಭಿನ್ನರಿಗೆ ಮಣಿದ ವರಿಷ್ಠರು – ಸುದ್ದಿ

**● ಇವರಿಬ್ಬರ ಜಗಳದಲ್ಲಿ ಕರ್ನಾಟಕ ಬಡವಾಯಿತು !!**

★★★

''ಶ್ರೇಷ್ಠ ಶಿಕ್ಷಕರಿಂದ ಮಾತ್ರ ಉತ್ತಮ ವಿದ್ಯಾರ್ಥಿಗಳ ಸೃಷ್ಟಿ'' – ಹೇಳಿಕೆ

''ಪಠ್ಯಕ್ರಮ ವಿರೋಧಿಸಿ ಪ್ರತಿಭಟನೆ'' – ಸುದ್ದಿ

**● ಒಂದರ ಕೆಳಗೆ ಇನ್ನೊಂದನ್ನು ಹಾಕಬೇಕೆ ?!**

★★★

''ಈಗಾದರೂ ಬಂದ ಹುಬ್ಬಳ್ಳಿಯಾಂವ...'' !!

**● ಅನ್ನಬಹುದು ಈಗ ..**

★★★

''ನಿರೀಕ್ಷಿತ ಸುಧಾರಣೆ ತರಲು ಸಿಂಗ್ ವಿಫಲ'' – ಟೈಮ್ ಪತ್ರಿಕೆ

**● Time is singing a new tune ಅಂತ ಅಪರಂಜಿ ನಕ್ಕಳಂತೆ !!**

★★★

''ವಿಧಾನ ಸೌಧದ ಮುಂದೆ ನಾಯಿಗಳ ಪೆರೇಡ್'' – ಪತ್ರಿಕೆ

**● ಛೇ, ತೀರ ಹೀಗೆ ಬರೆಯಬಾರದು !!**

★★★

''ಸ್ವಾರ್ಥಕ್ಕಾಗಿ ಅಧಿಕಾರ ಬಳಕೆ ಬೇಡ'' – ಹೇಳಿಕೆ

**● ಅರಣ್ಯರೋದನ ಅಂದರೇನು ಅಂತ ಈಗ ಅರ್ಥವಾಯಿತು !!**

★★★

''ಜಾತೀಯತೆಯ ಬೆತ್ತಲೆ ನರ್ತನ'' – ಶೀರ್ಷಿಕೆ

**● ಅದಕ್ಕೆ ವಸ್ತ್ರಾಭರಣ ತೊಡಿಸೋಣವೇ !!**

★★★

ದೇವ–ಕಣಗಳ ಸುದ್ದಿ ಕೇಳಿ ಬ್ರಹ್ಮ ''ಹಿಗ್ಸ್ ಬೋಸಾನಾಸ್ಮಿ'' ಅಂತ ನಕ್ಕನಂತೆ

★★★



# ಲಂಡನ್ ಒಲಂಪಿಕ್ಸ್

**– ವತ್ಸನ**

**ಲಂ**ಡನ್ನಿನ ಹೀಥ್ರೋ ವಿಮಾನ ನಿಲ್ದಾಣ ಸಾಮಾನ್ಯವಾಗಿ ವ್ಯಾಪಾರೀ ಮನೋಭಾವದ ನಿಲ್ದಾಣ. ಬಿಸಿನೆಸ್ ಲೈಕ್ ಅಂತಾರಲ್ಲಾ ಹಾಗೆ. ಎಲ್ಲರೂ ಅವರಷ್ಟಕ್ಕೆ ಅವರು ತಮ್ಮ ತಮ್ಮ ಕೆಲಸಗಳನ್ನು ಮಾಡಿಕೊಂಡು ಹೋಗುತ್ತಿರುತ್ತಾರೆ. ಒಂದು ಕುಶಲ ಪ್ರಶ್ನೆಯಾಗಲೀ ಒಂದು ಮುಗುಳ್ನಗೆಯಾಗಲೀ ಖಂಡಿತ ಇಲ್ಲಿ ಕಾಣಲಾಗದು. ಆದರೆ ನಿನ್ನೆ ಶರಲೇಖನೊಂದಿಗೆ ಸಿಂಗಪುರದಿಂದ ಇಲ್ಲಿಗೆ ಬಂದು ಇಳಿದಾಗ ಒಂದು ಹೊಸ ಅನುಭವ ನಮಗೆ ಕಾದಿತ್ತು. ಮೊಟ್ಟಮೊದಲಿಗೆ ಇಲ್ಲಿನ ಒಲಂಪಿಕ್ಸ್ ಪ್ರಯುಕ್ತ ಇಡೀ ನಿಲ್ದಾಣ ''ತಳಿರು ತೋರಣ'' ಗಳಿಂದ ಅಲಂಕೃತವಾಗಿ ಕಂಗೊಳಿಸುತ್ತಿತ್ತು. ಹಾಗೆಂದರೆ ಎಲ್ಲೆಲ್ಲಿ ನೋಡಿದರೂ ಐದು ಸುರುಳಿಗಳ ಒಲಂಪಿಕ್ ಚಿಹ್ನೆಗಳು, ವಿವಿಧ ನಮೂನೆಯ ಒಲಂಪಿಕ್ ಧ್ವಜಗಳು ಕಾಣುತ್ತಿದ್ದವು. ಸದಾ ಮುಖ ಸಿಂಡರಿಸಿಕೊಂಡಿರುತ್ತಿದ್ದ ಇಲ್ಲಿನ ಇಮ್ಮಿಗ್ರೇಷನ್ ಅಧಿಕಾರಿಗಳೂ ಸಹಾ ಹಲೋ ಅನ್ನುವಷ್ಟು ಸೌಜನ್ಯವನ್ನಂತೂ ತೋರಿದರು. ಕಸ್ಟಮ್ಸ್ ಮತ್ತು ಬ್ಯಾಗೇಜ್ ಎಲ್ಲ ವಿಭಾಗಗಳಲ್ಲೂ ಸಂಭ್ರಮದ ವಾತಾವರಣವಿದ್ದು ಹೊರಗೆ ಜಿನುಗುತ್ತಿದ್ದ ಮಳೆಯನ್ನೂ ಬೂದುಬಣ್ಣದ ಆಕಾಶವನ್ನೂ ಬಹುಮಟ್ಟಿಗೆ ಮರೆಯುವಂತೆ ಮಾಡಿತ್ತು. ಇನ್ಸ್ಪೆಕ್ಟರ್ ಜಿಮ್ ನಮ್ಮನ್ನು ಇದಿರುಗೊಳ್ಳಲು ನಿಲ್ದಾಣಕ್ಕೆ ತನ್ನ ಸಹಾಯಕಿ ಕಿಮ್‌ಳನ್ನು ಕಳಿಸಿದ್ದ. ಕಿಮ್ ಲೀ ಚೀನೀ ಮೂಲದ ಇಂಗ್ಲೀಷ್ ತರುಣಿ. ಬಹು ಚುರುಕಾಗಿ ನಮ್ಮನ್ನು ಪಾರ್ಕಿಂಗ್ ಲಾಟಿಗೆ ಕರೆದೊಯ್ದು ನಮ್ಮ ಬ್ಯಾಗುಗಳನ್ನು ಕಾರಿನ ಬೂಟಿನಲ್ಲಿ ಪೇರಿಸಿ ನನಗಾಗಿ ಕಾರಿನ ಹಿಂದಿನ ಬಾಗಿಲು ತೆರೆದು ನಿಂತಳು. ನಾನು ಒಳಕ್ಕೆ ಹೋಗಿ ಕುಳಿತೆ. ಶರಲೇಖ ಮುಂದಿನ ಸೀಟಿನ ಬಾಗಿಲು ತಾನೇ ತೆರೆದು ಒಳಕ್ಕೆ ಕುಳಿತ. ಕಿಮ್ ಡ್ರೈವರ್ ಸೀಟಿನಲ್ಲಿ ಕುಳಿತು ಕಾರನ್ನು ಸ್ಟಾರ್ಟ್ ಮಾಡಿದಳು. ಕಾರು ಭರ್ರನೆ ಎಂ ಟ್ವೆಂಟಿ ಫೈವ್ ಮೋಟರ್‌ವೇನಲ್ಲಿ ಹೊರಟಿತು. ಶರಲೇಖ ನನ್ನನ್ನು ಕುರಿತು ಕನ್ನಡದಲ್ಲಿ ''ರಾಮೇಶ್ವರಕ್ಕೆ ಹೋದರೂ...'' ಅಂತ ಪಿಸುಗುಟ್ಟಿದ. ಕಿಮ್ ''ಪಾರ್ಡನ್'' ಅಂತ ಶರಲೇಖನ ಕಡೆ ತಿರುಗಿದಳು. ಶರಲೇಖ ''I said grey and homely about the London weather to my friend'' ಎಂದು ಹೇಳಿ ನುಣುಚಿಕೊಂಡ.

ಶರಲೇಖನ ಕಾಮೆಂಟ್ ಬಗ್ಗೆ ಮೊದಲು ಹೇಳಿಬಿಡುತ್ತೇನೆ. ಸಿಂಗಪುರದ ಛಾಂಗೀ ವಿಮಾನ ನಿಲ್ದಾಣಕ್ಕೆ ನಮ್ಮ ಪೊಲೀಸ್ ಮಿತ್ರರನ್ನು ಕರೆದೊಯ್ದಾಗ ನಾವೂ ಬೆಂಗಳೂರಿಗೆ ಹೋಗುತ್ತಿದ್ದೇವೆ ಅಂದುಕೊಂಡಿದ್ದೆ. ಆದರೆ ಶರಲೇಖನ ಯೋಚನೆಯೇ ಬೇರೆ ಇತ್ತು ಅಂತ ನನಗೆ ಅನಂತರ ಗೊತ್ತಾಯಿತು. ಉಳ್ಳಾಗಡ್ಡಿ ಮತ್ತು ಅವರ ಮಿತ್ರರಿಗೆ ಟರ್ಮಿನಲ್ ಟುನಲ್ಲಿ ವಿದಾಯ ಹೇಳಿ ಶರಲೇಖ ನನ್ನನ್ನೂ ಕರೆದುಕೊಂಡು ಟರ್ಮಿನಲ್ ಒನ್‌ಗೆ ಬಂದ. ''ಏನು ಇಲ್ಲಿಗೆ ಯಾಕೆ ಬಂದಿದ್ದೇವೆ? ಎಲ್ಲಿಗೆ ಹೋಗ್ತಿರೋದು ನಾವು?'' ಅಂತ ಸ್ವಲ್ಪ ಗಾಬರಿಯಿಂದಲೇ ಕೇಳಿದೆ. ಆತ ನಸುನಕ್ಕು (ನನ್ನ ಗಾಬರಿ ನೋಡಿದಾಗಲೆಲ್ಲಾ ಅವನಿಗೆ ಅದೊಂದು ನಗು ಬರಿಸುವ ಸನ್ನಿವೇಶ) ''ನಾವು ಹೊರಟಿರೋದು ಲಂಡನ್ನಿಗೆ. ಜಿಮ್‌ನಿಂದ ಅರ್ಜೆಂಟ್ ಕರೆ ಬಂದಿತ್ತು'' ಎಂದ. ಲಂಡನ್ನಿಗೆ ಬಂದು ಕಿಮ್‌ಳ ಮುಖ ನೋಡಿದಾಗ ಸಿಂಗಪುರದ ಚೀನೀ ತರುಣಿಯರಿಗೆ ವಿದಾಯ ಹೇಳಿ ಲಂಡನ್ನಿಗೆ ಬಂದರೆ ಇಲ್ಲೂ ಅದೇ ಮುಖವೇ ಎಂದು ಶರಲೇಖನಿಗೆ ಅನ್ನಿಸಿದ್ದು ಸಹಜವೇ ಅನ್ನಿ. ಇರಲಿ.

ಕಾರು ಟೆಮ್ಸ್‌ನದಿಯ ಮೇಲಣ ಟವರ್ ಬ್ರಿಡ್ಜ್ ಮೇಲೆ ಸಾಗುತ್ತಿತ್ತು. ಬ್ರಿಡ್ಜ್‌ನ ಮೇಲಿನ ಅಡ್ಡ ಕಮಾನಿಗೆ ಅತಿದೊಡ್ಡ ಒಲಂಪಿಕ್ ಚಿಹ್ನೆಯನ್ನು ತೂಗುಹಾಕಿದ್ದರು. ಟೆಮ್ಸ್ ನದಿಯ ಮೇಲೆ ಚಲಿಸುತ್ತಿದ್ದ ಅನೇಕ ನಾವೆಗಳ ಮೇಲೆ ಒಲಂಪಿಕ್ ವರ್ತುಲಗಳು ರಾರಾಜಿಸುತ್ತಿದ್ದವು. ಬ್ರಿಡ್ಜ್ ದಾಟಿ ನದಿಯ ಬಲ ದಂಡೆಯ ಮೇಲೆ ಸಾಗುತ್ತಿದ್ದಾಗ ಒಲಂಪಿಕ್ ಜ್ವರ ಇಲ್ಲಿನವರಿಗೆ ಬಲವಾಗಿ ಅಂಟಿಕೊಂಡಿದೆ ಅನ್ನಿಸುವಷ್ಟು ಮಟ್ಟಿಗೆ ಲಂಡನ್ ಪಟ್ಟಣ ಅಲಂಕೃತವಾಗಿತ್ತು. ಕಿಟಕಿಗಳಲ್ಲಿ ತೂಗುಹಾಕಿದ್ದ ಹೂವಿನ ಬುಟ್ಟಿಗಳು ತುಂಬಾ ಚೆನ್ನಾಗಿ ಕಾಣುತ್ತಿದ್ದವು. ಕಿಮ್ ನಮ್ಮನ್ನು ವೆಸ್ಟ್‌ಮಿನ್‌ಸ್ಟರ್‌ನ ಬ್ರಾಡ್‌ವೇಯಲ್ಲಿದ್ದ ಜಿಮ್‌ನ ಆಫೀಸಿಗೆ ಕರೆದೊಯ್ದಳು. ನಾವು ಕಾರಿನಿಂದ ಇಳಿದೆವು. ''ಬ್ಯಾಗೇಜ್ ಕಾರಿನಲ್ಲೇ ಇರಲಿ ಅಂತ ಜಿಮ್ ಹೇಳಿದ್ದಾರೆ. ನೀವು ಅವರನ್ನ ಭೇಟಿ ಮಾಡಿದ ನಂತರ ಕಾರಿಗೇ ಬಂದುಬಿಡಿ. ನಿಮ್ಮ ವಸತಿ ಸ್ಥಳಕ್ಕೆ ಕರೆದೊಯ್ಯುವೆ'' ಎಂದು ಹೇಳಿ ಕಿಮ್ ಪಾರ್ಕ್ ಮಾಡಲು ಬೇಸ್‌ಮೆಂಟಿಗೆ ಕಾರನ್ನು ನಡೆಸಿದಳು.

ಜಿಮ್ ನಮ್ಮನ್ನು ಬಹು ಆದರದಿಂದ ಇದಿರುಗೊಂಡು ತನ್ನ ಆಫೀಸಿಗೆ ಕರೆದುಕೊಂಡು ಹೋದ. ಕುಶಲಪ್ರಶ್ನೆಗಳಾದನಂತರ ಆತ ನೇರವಾಗಿ ವಿಷಯಕ್ಕೆ ಬಂದ. ''ನಿಮ್ಮನ್ನು ಇಲ್ಲಿಗೆ ಕರೆಸಿರುವ ಕಾರಣ ನಮ್ಮ ಇಲಾಖೆಗೆ ಅಥವಾ ನಮ್ಮ ಸರ್ಕಾರಕ್ಕೆ ಸಂಬಂಧಿಸಿರೋ ವಿಷಯಾನೇ ಅಲ್ಲ. ನಿಮ್ಮ ಸರ್ಕಾರದವರು ತಮ್ಮದೇ ಆದ ಒಂದು ಸಮಸ್ಯೆಗೆ ನಮ್ಮ ಸಹಾಯ ಕೋರಿದ ನಂತರ ನಾನು ನೀವೇ ಅದನ್ನು ಪರಿಹರಿಸಲು ಸಮರ್ಥರು ಅಂತ ನಿರ್ಧರಿಸಿ ನಿಮ್ಮನ್ನ ತರಾತುರಿಯಿಂದ ಇಲ್ಲಿಗೆ ಕರೆಯಬೇಕಾಯಿತು'' ಅಂದ ಜಿಮ್.

''ಏನದು ಈ ಸಮಸ್ಯೆ ನಮ್ಮ ಸರ್ಕಾರದವರದ್ದು. ಅವರು ನನಗೇಕೆ ಇದನ್ನು ನೇರವಾಗಿ ತಿಳಿಸಲಿಲ್ಲ?'' ಅಂತ ಶರಲೇಖ ಕೇಳಿದ.

''ಅದನ್ನು ನಾನು ಹೇಳುವ ಬದಲು ನಿಮ್ಮ ಪರಿಚಯದವರೊಬ್ಬರು ನಿಮಗೆ ಎಲ್ಲವನ್ನೂ ವಿವರವಾಗಿ ತಿಳಿಸಲು ಬೆಂಗಳೂರಿನಿಂದ ಇಲ್ಲಿಗೆ ಬಂದಿದ್ದಾರೆ. ಅವರಿಗೂ ಇಲ್ಲಿಗೆ ಬರಲು ಹೇಳಿದ್ದೇನೆ. ಒಂದು ನಿಮಿಷ ಇರಿ, ಅವರು ಬಂದಿದ್ದಾರೆಯೇ ಅಂತ ಚೆಕ್ ಮಾಡುತ್ತೇನೆ''

ಎಂದು ಹೇಳಿ ಇಂಟರ್‌ಕಾಮ್‌ನಲ್ಲಿ ಏನೋ ಪಿಸುಗುಟ್ಟಿದ. ಈ ಜನರೇ ಹೀಗೆ. ಬಹಳ ಸಣ್ಣದನಿಯಲ್ಲಿ ಬಹು ನಾಜೂಕು ಮಾತುಕತೆ. ಯಾರಿಗೆ ಏನು ಡಿಸ್ಟರ್ಬ್ ಆಗುವುದೋ ಎಂಬ ಕಾಳಜಿ.

ಅಷ್ಟುಹೊತ್ತಿಗೆ ಜಿಮ್‌ನ ಆಫೀಸಿನ ಬಾಗಿಲು ತೆರೆಯಿತು. ಒಬ್ಬ ಇಂಗ್ಲೀಷ್ ಪೋಲೀಸ್ ಅಧಿಕಾರಿ. ಅವನೊಂದಿಗೆ ಒಬ್ಬ ಭಾರತದೇಶದವ. ಯಾರಿವನು ಎಂದು ನೋಡುವಷ್ಟರಲ್ಲಿ ''ಮಕರಧ್ವಜ'' ಎಂದು ಕೂಗುತ್ತಾ ಶರಲೇಖ ಎದ್ದು ನಿಂತು ತನ್ನ ಅಣ್ಣನನ್ನು ತಬ್ಬಿ ಸ್ವಾಗತಿಸಿದ. ಅನಂತರ ಎಲ್ಲರೂ ಜಿಮ್‌ನ ಆಫೀಸಿನಲ್ಲಿದ್ದ ಕಾನ್ಫರೆನ್ಸ್ ಮೇಜಿನ ಸುತ್ತ ಕುಳಿತೆವು.

ಮಕರಧ್ವಜನೇ ಪ್ರಾರಂಭಿಸಿದ. ''ವಿಷಯ ಬಹು ಸೂಕ್ಷ್ಮ. ಅಧಿಕಾರದಿಂದ ಏನೂ ಮಾಡಲಾಗದು ಎನ್ನುವ ಪರಿಸ್ಥಿತಿ. ಅದಕ್ಕೇ ದೆಹಲಿಗೆ ನನ್ನನ್ನು ಕರೆಸಿಕೊಂಡು ಇಲ್ಲಿಗೆ ಕಳಿಸಿದ್ದಾರೆ. ಇಲ್ಲಿನ ಸ್ಕಾಟ್ಲೆಂಡ್ ಯಾರ್ಡ್ ನೀಡುವ ಸಹಾಯವೆಲ್ಲಾ ಖಾಸಗಿಯಾಗಿ, ಆಫ್ ದ ರೆಕಾರ್ಡ್ ಅಂತಾರಲ್ಲಾ ಹಾಗೆ. ಈ ಒಲಂಪಿಕ್ಸ್ ಸಮಾರಂಭದ ಕೊನೆಯ ದಿನ ನಮ್ಮ ಭಾರತ ದೇಶ ತಲೆತಗ್ಗಿಸುವಂತಹ ಕೆಲಸವೊಂದು ನಡೆಯಲಿದೆ. ಅದನ್ನು ಹೇಗಾದರೂ ತಪ್ಪಿಸಲು ನಾವು ಸಂಚಿಕೆ ಹೂಡಿ ಅದನ್ನು ಯಶಸ್ವಿಯಾಗಿ ಕಾರ್ಯಗತಗೊಳಿಸಬೇಕು. ಯಾವುದೇ ಖಾಸಗೀ ಸಹಾಯವನ್ನ ಜಿಮ್ ಕೊಡಲು ಒಪ್ಪಿದ್ದಾನೆ. ಶರಲೇಖ ಈ ಕೆಲಸ ನಿನ್ನ ಚಾಣಾಕ್ಷತನವನ್ನೆಲ್ಲಾ ಪರೀಕ್ಷಿಸುತ್ತೆ ಅಂತ ಅನಿಸುತ್ತೆ ನನಗೆ. ಕೆಲಸ ವಹಿಸಿಕೊಳ್ಳಲು ಒಪ್ಪಿಗೆ ತಾನೇ?''

ಶರಲೇಖ ಒಂದೆರಡು ನಿಮಿಷ ಸುಮ್ಮನಿದ್ದ. ಅನಂತರ ''ಸಾರೇ ಜಹಾಂಸೆ ಅಚ್ಛಾ ಹಿಂದೂಸ್ತಾನ್ ಹಮಾರಾ...'' ದೇಶಕ್ಕಾಗಿ ಖಂಡಿತಾ ಮಾಡುವೆ ಅಂತ ಘೋಷಿಸಿದ. ಅನಂತರ ಜಿಮ್ ಎದ್ದುನಿಂತು ''ಬನ್ನಿ ವತ್ಸನ ಅವರೇ ನಿಮ್ಮನ್ನು ನಿಮ್ಮ ವಸತಿಗೃಹಕ್ಕೆ ಬಿಡುತ್ತೇನೆ. ಅಣ್ಣತಮ್ಮಂದಿರು ಮುಂದಿನ ವಿವರಗಳನ್ನು ಮಾತನಾಡಿಕೊಳ್ಳಲಿ. ನಮ್ಮ ಸಹಾಯ ಬೇಕಾದಾಗ ನಾವು ಪ್ರವೇಶಿಸಿದರಾಯಿತು'' ಎಂದು ಹೇಳಿದ. ಮಕರಧ್ವಜ ಮಾತನಾಡುವ ಸರ್ಕಾರೀ ವಿಷಯವನ್ನು ನನ್ನ ಮುಂದೆ ಚರ್ಚಿಸಲು ನನಗೆ ಸೆಕ್ಯೂರಿಟಿ ಕ್ಲಿಯರೆನ್ಸ್ ಸಿಕ್ಕಿಲ್ಲ ಎಂಬುದು ಖಚಿತವಾಯಿತು. ಇದನ್ನೆಲ್ಲಾ I have to take in my stride ಅಂದುಕೊಂಡು ಜಿಮ್ ಜೊತೆ ಹೊರಕ್ಕೆ ನಡೆದೆ.

ನನ್ನನ್ನು ಇಳಿಸಿದ ಪೊಲೀಸ್ ಗೆಸ್ಟ್ ಹೌಸ್ ಕೊವೆಂಟ್ ಗಾರ್ಡನ್ನಿನಲ್ಲಿತ್ತು. ಇಲ್ಲಿನ ಮಾರುಕಟ್ಟೆ ನೂರುವರ್ಷಗಳಷ್ಟು ಹಳೆಯದು. ಅಷ್ಟೇ ಚೆನ್ನಾಗಿ ಹಳೆಯ ಕಟ್ಟಡಗಳನ್ನು ಇಲ್ಲಿನ ಜನ ಕಾಪಾಡಿಕೊಂಡು ಬಂದಿದ್ದಾರೆ. ಅದನ್ನೆಲ್ಲಾ ನೋಡುತ್ತಾ ಸಂಜೆಯನ್ನು ಕಳೆದೆ. ಸಂಜೆಗೆ ಶರಲೇಖ ಮತ್ತು ಮಕರಧ್ವಜ ಇಬ್ಬರೂ ವಸತಿಗೃಹಕ್ಕೆ ಬಂದರು. ನನಗೋ ಕುತೂಹಲ. ಆದರೆ ಅಣ್ಣ ತಮ್ಮ ಮಾತನಾಡವಲ್ಲರು. ಕೊನೆಗೆ ಶರಲೇಖ ''ಸಮಯ ಬಹಳವಿಲ್ಲ, ಇಂದು ಸಂಜೆಯೇ ನಾವು ಕಾರ್ಯೋನ್ಮುಖರಾಗಬೇಕು. ನೀನೂ ನಮ್ಮ ಜೊತೆ ಬರಬಹುದು. ವಿವರಗಳನ್ನು ಅನಂತರ ತಿಳಿಸುವೆ. ನೀನು ಏನನ್ನೂ ಮಾತನಾಡಬೇಕಾದ ಅಗತ್ಯವಿಲ್ಲ, ಸುಮ್ಮನೆ ಕುಳಿತು ಎಲ್ಲವನ್ನು ಮನಸ್ಸಿನಲ್ಲೇ ದಾಖಲಿಸುತ್ತಿರು'' ಅಂದ ಶರಲೇಖ. ಮಕರಧ್ವಜ

ಬಾಯಿಹಾಕಿ, ''ಏನೇ ಅಪಾಯ ಬಂದಂತೆ ಕಂಡರೂ ಮುಖದಲ್ಲಿ ಗಾಬರಿ ತೋರಿಸಬೇಡ. ಹೇಗಿದ್ದರೂ ನಮ್ಮಿಬ್ಬರ ಜೊತೆಗೆ ಜಿಮ್ ಸಹಾ ಇರುತ್ತಾನೆ'' ಅಂತ ಹೇಳಿ ಈಗಿನಿಂದಲೇ ನನಗೆ ಗಾಬರಿಯಾಗುವಂತೆ ಮಾಡಿದ.

ಸಂಜೆ ಎಂಟಕ್ಕೆ ನಮ್ಮ ವಸತಿಗೃಹದ ಮುಂದೆ ಒಂದು ಅತ್ಯಾಧುನಿಕ ಜಾಗ್ವರ್ ಕಾರು ಬಂದು ನಿಂತಿತು. ಮುಂದೆ ಜಿಮ್ ಕುಳಿತಿದ್ದ. ಅತ್ಯಂತ ದುಬಾರಿಯಾಗಿದ್ದಂತಿದ್ದ ಸಿವಿಲಿಯನ್ ಸೂಟನ್ನು ಧರಿಸಿದ್ದ ಜಿಮ್. ಶರಲೇಖ ಮತ್ತು ಮಕರಧ್ವಜ ಸಹಾ ಭಾರತದ ರಾಷ್ಟ್ರ ಉಡುಪಾದ ಅಚ್‌ಕನ್ ಕೋಟು ಟೂಡೀದಾರ್‌ಗಳನ್ನು ಧರಿಸಿದ್ದರು. ನಾನೊಬ್ಬನೇ ಭಿಕಾರಿಯಂತೆ ಪ್ಯಾಂಟು ಶರಟು ಪುಲ್ಲೋವರ್ ಧರಿಸಿದ್ದೆ. ನನ್ನ ಆತಂಕ ನೋಡಿ ಶರಲೇಖ ''ನಿನ್ನ ಪಾತ್ರಕ್ಕೆ ನಿನ್ನ ವೇಷ ಸರಿಯಾಗಿದೆ. ಆತಂಕ ಬೇಡ'' ಅಂದ. ಕಾರು ಸೇಂಟ್ ಜೇಮ್ಸ್ ಪಾರ್ಕ್ ದಾಟಿ ಬಕಿಂಗ್ಹ್ಯಾಮ್ ಅರಮನೆಯತ್ತ ಹೊರಟಿತು. ''ಅರೆ ಈ ಪರಿಸರದಲ್ಲಿ ನಾವು ಎಲ್ಲಿಗೆ ಹೋಗುತ್ತಿರಬಹುದು ?'' ಎಂದು ಯೋಚಿಸುತ್ತಿದ್ದಂತೆ ಕಾರು ಅರಮನೆಯ ಎಡಭಾಗದ ರಸ್ತೆಯಲ್ಲಿ ಹಾದು ರಸ್ತೆಯ ಕೊನೆಯಲ್ಲಿದ್ದ ಅರಮನೆಯ ಗೇಟಿನೊಳಗೆ ನುಗ್ಗಿತು. ನೋಡುತ್ತಿದ್ದಂತೆ ಅರಮನೆಯ ಹಿಂಭಾಗದಲ್ಲಿದ್ದ ಇನ್ನೊಂದು ಭವ್ಯವಾದ ಭವನದ ಪೋರ್ಟಿಕೋ ಮುಂದೆ ಕಾರು ನಿಂತಿತು. ನಾವೆಲ್ಲಾ ಕಾರಿನಿಂದ ಇಳಿದೆವು. ಒಬ್ಬ ಅರಮನೆಯ ಅಧಿಕಾರಿ ನಮ್ಮನ್ನು ಒಳಕ್ಕೆ ಕರೆದುಕೊಂಡು ಹೋಗಿ ಆ ಭವನದ ದಿವಾನ್ ಖಾನೆಯಲ್ಲಿ ಕುಳ್ಳಿರಿಸಿದ. ನಾನು ಬೆರಗು ಕಣ್ಣಿನಿಂದ ಎಲ್ಲವನ್ನೂ ನೋಡುತ್ತಿದ್ದೆ.

ಸ್ವಲ್ಪ ಹೊತ್ತಿನಲ್ಲೇ ಇನ್ನೊಂದು ಜಾಗ್ವಾರ್ ಕಾರು ಬಂದದ್ದನ್ನು ನೋಡಿದೆ. ಅದರಿಂದ ಇಬ್ಬರು ಮಹನೀಯರು ಇಳಿದರು. ಒಬ್ಬ ಅಚ್ಚ ಭಾರತೀಯ. ಕಪ್ಪು ಗಡ್ಡದ ಮುಖ. ಕಪ್ಪು ಕನ್ನಡಕ. ಸುಮಾರು ವಜನ್ ಇದ್ದ ಆಸಾಮಿ. ಇನ್ನೊಬ್ಬ ಯೂರೋಪಿಯನ್. ಇಬ್ಬರೂ ಬಂದು ನಮ್ಮೊಂದಿಗೆ ಕುಳಿತರು. ಒಬ್ಬ ಸೇವಕ ಬಂದು ದಿವಾನ್ ಖಾನೆಯ ಬಾಗಿಲು ಮುಚ್ಚಿ ಹೋದ.

ಜಿಮ್ ಮೊದಲು ಮಾತನಾಡಲು ಶುರುಮಾಡಿದ. ''ಒಲಂಪಿಕ್ ಸಮಾರಂಭದಲ್ಲಿ ನಿಮಗೆ ಸ್ಕ್ಯಾಲ್ ಪ್ರಶಸ್ತಿಯನ್ನ ಮಹಾರಾಣಿಯವರ ಕೈಯಿಂದ ಕೊಡಿಸಲು ಪ್ಯಾಲೇಸ್ ಅಧಿ ಕಾರಿಗಳು ಒಪ್ಪಿದ್ದಾರೆ. ಈ ಮೂವರು ಭಾರತೀಯರು ಭಾರತದ ದೂತಾವಾಸದವರು. ಭಾರತ ಸರ್ಕಾರದಿಂದ ಏನೂ ಅಡಚಣೆ ಬರದಂತೆ ಇವರುಗಳು ನೋಡಿಕೊಳ್ಳುತ್ತಾರೆ. ಇಂತಹ ವಿಷಯಗಳನ್ನು ಈ ಅರಮನೆಯಲ್ಲಿ ಮಾತನಾಡುವುದೇ ಅಪರಾಧ. ಆದರೆ ನಿಮಗೋಸ್ಕರ ಇದನ್ನು ಮಾಡುತ್ತಿದ್ದೇನೆ. ನೀವು ಒಪ್ಪಿಕೊಂಡ ಹಣವನ್ನು ತಂದಿದ್ದೀರ ತಾನೆ?'' ಅಂದ ಜಿಮ್.

ಬಂದಿದ್ದ ಭಾರತೀಯ ಬಹು ಗಟ್ಟಿಕುಳದಂತೆ ಕಂಡಿತು. ಅರಮನೆಯ ಪರಿಸರ ಅವನಿಗೆ ಅಚ್ಚರಿಯನ್ನು ತಂದಂತೆ ಕಾಣಲಿಲ್ಲ. ''ಖಂಡಿತ ತಂದಿದ್ದೇವೆ. ಆದರೆ ಹಣವನ್ನು ಕೊಟ್ಟಮೇಲೆ, ನಾಳೆ ಒಲಂಪಿಕ್ ಸಮಾರಂಭದಲ್ಲಿ ನನಗೆ ಪ್ರಶಸ್ತಿ ಸಿಗುವ ಬಗ್ಗೆ ನನಗೆ ಗ್ಯಾರಂಟಿ ಏನು?'' ಅಂತ ದಿಟ್ಟತನದಿಂದ ಕೇಳಿದ.

ಶರಲೇಖ, ''ಇದನ್ನು ಊಹಿಸಿಯೇ ನಾವು ನಿಮ್ಮ ಹಣಕ್ಕೆ ಪ್ರತಿಯಾಗಿ ನಮ್ಮ ದೂತಾವಾಸದ ಗುಮಾಸ್ತರೊಬ್ಬರನ್ನು ನಿಮ್ಮೊಡನೆ ಒತ್ತೆ ಇಡಲು ಕರೆ ತಂದಿದ್ದೇವೆ. ಅವರನ್ನು ನೀವು ಕರೆದುಕೊಂಡು ಹೋಗಿ, ಪ್ರಶಸ್ತಿ ದೊರಕಿದ ನಂತರ ಬಿಡುಗಡೆ ಮಾಡಬಹುದು. ನಾವೇನಾದರೂ ಮೋಸಮಾಡಿದರೆ ಅವರು ಹೇಗಿದ್ದರೂ ನಿಮ್ಮ ಕೈಲಿರುತ್ತಾರಲ್ಲಾ, ನೋಡಿ ಅವರೇ ನಿಮ್ಮ ಒತ್ತೆಯಾಳು'' ಅಂತ ನನ್ನ ಕಡೆ ತೋರಿಸಿ ಹೇಳಿದ.

ನನ್ನ ಹೃದಯ ಬಾಯಿಗೆ ಬಂತು. ಆದರೂ ಸುಮ್ಮನಿದ್ದೆ.

ಆಸಾಮಿ ಈ ಶರತ್ತಿಗೆ ಒಪ್ಪಿದಂತೆ ಕಂಡಿತು. ನೀಲಿ ಸೂಟ್ ಕೇಸ್ ಒಂದನ್ನು ತೆಗೆದು ಜಿಮ್ ಕೈಲಿ ನೀಡುತ್ತಾ ''ಒಂದು ಮಿಲಿಯನ್'' ಅಂತ ಹೇಳಿದ. ಅದೇ ಕ್ಷಣದಲ್ಲಿ ದಿವಾನ್ ಖಾನೆಯ ಬಾಗಿಲು ತೆರೆಯಿತು . ಐವರು ಸಶಸ್ತ್ರಧಾರಿ ಬ್ರಿಟಿಷ್ ಪೊಲೀಸರು ಎಕೆ ಫಾರ್ಟಿಸೆವೆನ್‌ಗಳನ್ನು ಝಳಪುಸುತ್ತಾ ನುಗ್ಗಿ ''You are all under arrest'' ಎಂದು ಹೇಳಿ ನಮ್ಮೆಲ್ಲರನ್ನೂ ಹೊರಕ್ಕೆ ಎಳೆದುಕೊಂಡು ಹೋದರು. ಬಂದ ಇಬ್ಬರು ಅತಿಥಿಗಳನ್ನು ಒಂದು ಪೊಲೀಸ್ ವ್ಯಾನಿನಲ್ಲಿ ದಬ್ಬಿ ಅವರನ್ನು ಠಾಣೆಗೆ ಒಯ್ದರು. ಅನಂತರ ಆ ಪೊಲೀಸರ ಮುಖಂಡ ''ನೀವುಗಳೆಲ್ಲಾ ಪೊಲೀಸ್ ಠಾಣೆಗೆ ನಿಮ್ಮ ಕಾರಿನಲ್ಲೇ ಬರಬಹುದು'' ಎಂದು ಹೇಳಿ ಜಿಮ್‌ಗೆ ಸಲ್ಯೂಟ್ ಹೊಡೆದು ನಾವು ಕಾರಿನಲ್ಲಿ ಕುಳಿತನಂತರ ಅಲ್ಲಿಂದ ತನ್ನ ಪಡೆಯೊಂದಿಗೆ ಹೊರಟ.

ನಡೆದ ವಿದ್ಯಮಾನಗಳ ಬಗ್ಗೆ ನನಗೆ ತಲೆಬುಡ ಅರ್ಥವಾಗಲಿಲ್ಲ. ಮಕರಧ್ವಜ ತನ್ನ ವಿವರಣೆ ಪ್ರಾರಂಭಿಸಿದ. ''ಬ್ರಿಟಿಷ್ ಪೊಲೀಸರು ದಸ್ತಗಿರಿ ಮಾಡಿದ ಆಸಾಮಿ ಸಾಮಾನ್ಯದವನಲ್ಲ. ಭಾರತದ ಒಲಂಪಿಕ್ ಮೂವ್ಮೆಂಟ್‌ಗೆ ತಾನು ಸಲ್ಲಿಸಿರುವ ಸೇವೆಗಾಗಿ ಬ್ರಿಟಿಷ್ ರಾಣಿಯವರ ಕೈಯಿಂದ ಪ್ರಶಸ್ತಿ ಪಡೆಯಬೇಕು ಅಂತ ಅವನ ಹಠ. ಅದಕ್ಕಾಗಿ ಸರ್ಕಾರ ಬೇಡವೆಂದರೂ ಕೇಳದೇ ಅವನು ಇಲ್ಲಿಗೆ ಓಡಿ ಬಂದಿದ್ದಾನೆ. ನಮ್ಮ ಸರ್ಕಾರದಿಂದ ಈ ಅವಮಾನವನ್ನು ನಿಲ್ಲಿಸುವ ಆದೇಶ ಹೊತ್ತು ನಾನು ಇಲ್ಲಿಗೆ ಬಂದೆ. ಜಿಮ್‌ನ ಸಹಾಯದಿಂದ ಸ್ಕಾಂಟ್ಲೆಂಡ್ ಯಾರ್ಡಿನ ಒಬ್ಬ ಏಜೆಂಟ್ ಒಲಂಪಿಕ್ ಅಧಿಕಾರಿಯಂತೆ ನಟಿಸಿ ಆಸಾಮಿಗೆ ಪ್ರಶಸ್ತಿ ಕೊಡಿಸುವುದಾಗಿ ನಂಬಿಸಿದ್ದ. ಆತ ಈ ದೇಶದಲ್ಲಿ ನ್ಯಾಯ ಬಾಹಿರವಾಗಿ ಏನನ್ನೂ ಮಾಡಿಲ್ಲದಿರುವುದರಿಂದ ಜಿಮ್ ಅವನನ್ನು ನೇರವಾಗಿ ಕಾರಣವಿಲ್ಲದೇ ದಸ್ತಗಿರಿ ಮಾಡುವುದು ಸಾಧ್ಯವಿರಲಿಲ್ಲ. ಅದಕ್ಕಾಗಿ ನಾನು ಮತ್ತು ಶರಲೇಖ ಈ ಆಟ ಹೂಡಿದೆವು. ಆಸಾಮಿ ಬಲೆಗೆ ಬಿತ್ತು. ಈಗ ಆತ ಲಂಚ ನೀಡಲು ಪ್ರಯತ್ನಿಸಿರುವುದು ವಿಡಿಯೋದಲ್ಲಿ ದಾಖಲಾಗಿರುವುದರಿಂದ ಮೂರುದಿನಗಳ ಜುಡಿಷಿಯಲ್ ಕಸ್ಟಡಿ ಗ್ಯಾರಂಟಿ. ಅಷ್ಟರಲ್ಲಿ ಒಲಂಪಿಕ್ ಸಮಾರಂಭ ಮುಗಿದುಹೋಗಿರುತ್ತದೆ. ನಮ್ಮ ದೇಶದ ಮರ್ಯಾದೆಯೂ ಉಳಿದಂತಾಗುತ್ತದೆ. ಒಟ್ಟಿನಲ್ಲಿ ಇದನ್ನೆಲ್ಲಾ ವ್ಯವಸ್ಥೆಮಾಡಿದ ಜಿಮ್‌ಗೆ ನಮ್ಮ ವಂದನೆಗಳು ಸಲ್ಲಬೇಕು'' ಅಂದ ಮಕರಧ್ವಜ. ''ಅಲ್ಲಾ ಈ ಕೆಲಸಕ್ಕೆ ನನ್ನನ್ನು ಒತ್ತೆ ಇಡಲೂ ಸಿದ್ಧರಾಗಿದ್ದರಲ್ಲಾ ನೀವುಗಳು'' ಅಂತ ನಾನು ನಗಾಡಿದೆ. ''ದೇಶದ ಸೇವೆಗಾಗಿ ಪ್ರಾಣಾರ್ಪಣೆ ಮಾಡಲೂ ಸಹಾ ಸಿದ್ಧರಾಗಿರಬೇಕು ವತ್ಸ'' ಎಂದು ಶರಲೇಖ ನಗುತ್ತಾ ಹೇಳಿದ.

✵

# ಎಲ್ಲಿ ಕಳಕೊಂಡವಿ ಆ ಖುಷಿ?

- ಭೂಮಿತಾಯಿ

ಶ್ರಾವಣದ ಜಿಟಿಜಿಟಿ ಮಳಿ ಸುರು ಆತಂದ್ರ ಆತಂಕ ಶುರು ಆಗ್ತಿತ್ತು. ಪಂದರಾ ಆಗಸ್ಟ್ ತಯಾರಿಗೆ ಮಳಿಯೊಳಗ ಬೀದರ್‌ನ ಕೆಮ್ಮಣ್ಣಿನೊಳಗ ನಡಿಯೂ ನೆನಪು ಯಾವತ್ತಿದ್ದರೂ ಹಚ್ಚ ಹಸಿರು. ಯಾಕಂದ್ರ ಬಿಳೀ ಸ್ಕರ್ಟ್ ಹಾಕ್ಕೊಂಡು ಕವಾಯತ್ ಮಾಡಾಕ ಕರ್ಕೊಂಡು ಹೋಗ್ತಿದ್ರು. ಪಟಪಟ ಹೆಜ್ಜಿ ಹಾಕಿದ್ಹಂಗ, ಛಟಛಟ ಕೆಸರಿನ ಹನಿ ಹಿಂದ ಸಿಡೀತಿದ್ವು. ಮನಿಗೆ ಹೋದ್ರ ಕೆಲಸದಾಕಿ ಬೈತಿದ್ಲು. ಅಮ್ಮನೂ ಧ್ವನಿಗೂಡಿಸುತ್ತಿದ್ದಳು. ಅವರಿಗೆ ಮಳಿಗಾಲದಾಗ ಸಮವಸ್ತ್ರ ಒಣಗೂದಿಲ್ಲ ಅಂತ ಅವರ ಚಿಂತಿ.

**ಕಳಕೊಂಡಿದ್ದು ಗೊತ್ತಾಗ್ತದ. ಆದ್ರ ಅದನ್ನೇ ಗಳಸೂದು ಗೊತ್ತಾಗೂದಿಲ್ಲ... ಯಾರಿಗೆ ಕೇಳೂನು?**

ನಮಗಂತೂ ಹಿಮಬಿಳಿಯ ಅಂಗಿಮ್ಯಾಲೆ ಕೆಂಬಣ್ಣದ ಚುಕ್ಕಿ ಸಿಡಿದಾಗಲೆಲ್ಲ ಎಷ್ಟು ಛಂದ ಕಾಣ್ತಿತ್ತು. ಮೊಣಕಾಲು ಬಗ್ಗಿಸಿ ಹಿಂತಿರುಗಿ ನೋಡ್ಕೊಂಡೇ ಬರ್ತಿದ್ವಿ.

ಬೀದರ್‌ನಾಗ ಹಿಂದೀ ಪ್ರಭಾವ ಭಾಳ. ಹಿಂದೂಸ್ತಾನಿ ಸಂಗೀತದ ಪ್ರಭಾವನೂ ಭಾಳ. ಜುಲೈ ತಿಂಗಳನಿಂದಲೇ ಸಾಲ್ಯಾಗ 'ಸಾರೇ ಜಹಾಂಸೆ ಅಚ್ಛಾ' ಹಾಡು ಹೇಳಿಕೊಡೋರು. ಕವಿ ಇಕ್ಬಾಲ್ ಅವರ ಈ ಹಾಡು ಹೇಳೂಮುಂದ ಒಂದು ಸಾಲು ಬರ್ತದ 'ಗೋದಿ ಮೇ ಖೇಲತಿ ಹೈ' ಕನ್ನಡದ ಮಕ್ಕಳಾದ ನಮಗೆಲ್ಲ ಅದು ಗೋಧಿ ಅಂತನೇ ಅನಸೂದು. ಎಷ್ಟು ಹೇಳಿದ್ರೂ ಗೋದಿ, ಗೋಧಿನೇ ಆಗ್ತಿತ್ತು. ಇದಾದ ಮ್ಯಾಲೆ 'ಹಿಂದ ದೇಶಕೆ ನಿವಾಸಿ ಸಭಿ ಜನ ಏಕ್ ಹೈ' ಹಾಡು. ಹಾಡಿನ ಎರಡನೆ ಸಾಲು ಬಂದಕೂಡಲೆ ಹಲ್ಲು ಕಿಸೀತಿದ್ವಿ. ಮಾಸ್ತರ್ ಬೈತಿದ್ರು. ರಂಗ್ ರೂಪ್ ವೇಶ ಭಾಷಾ ಚಾಹೇ ಅನೇಕ್ ಹೈ' ಅಂತ ಹಾಡು. ರಂಗ ರೂಪ ಅಂದಕೂಡ್ಲೆ ಬ್ಯಾರೆ ಬ್ಯಾರೆ ಬಣ್ಣದೋರು ಅಂತ ನೆನಸ್ಕೊಂಡು ನಗತಿದ್ವಿ.

ಇಷ್ಟೆಲ್ಲ ಸಡಗರ ಪಂದರಾ ಆಗಸ್ಟ್ ಅಲ್ಲಲ್ಲ ಆಗಷ್ಟಕ್ಕ ಇರ್ತಿತ್ತು. ನಮ್ಮ ಸಾಲ್ಯಾಗ ಬೆಂಕಿ ಹತ್ತಿ ಉರದ್ಹಂಗ ಒಂದೇ ಸಮ 'ಜನಗಣಮನ' ಹೇಳಸೋರು. ಬರೋಬ್ಬರಿ 54 ಸೆಕೆಂಡ್‌ನಾಗ ಹಾಡಬೇಕು ಅಂತ ಟೀಚರ್ ಕೈಯ್ಯಾಗ ಗಡಿಯಾರ ಹಿಡಕೊಂಡು ಕುಂದ್ರೋರು. ನಾವದನ್ನ ಹೆಂಗ ಹಾಡ್ತೀವಿ ಅನ್ನೂದಕ್ಕಿಂತ ಎಷ್ಟು ಸೆಕೆಂಡ್ನಾಗ ಹಾಡ್ತೀವಿ ಅನ್ನೂದೆ ಅವರಿಗೆ ಮುಖ್ಯ ಆಗಿರ್ತಿತ್ತು.

ಆಗಸ್ಟ್ ಪಂದರಾದ ಇನ್ನೊಂದು ಆಕರ್ಷಣೆ ಅಂದ್ರ ಆ ಕವಾಯತ್ತು. ಢಂಢಂ ಅನ್ನೊ ಸಪ್ಪಳದಾಗ ಪೊಲೀಸ್ ಬ್ಯಾಂಡ್‌ನೋರು ಬಾರಸ್ತಿದ್ರ.. ಕಾಲು ದಾಯಿನೆ ಬಾಯಿನೆ,

ದಾಯಿನೆ, ದಾಯಿನೆ ಬಾಯಿನೆ ದಾಯಿನೆ ಅಂತ ಮನಸಿನಾಗ ಹೇಳ್ತಿತ್ತು. ಅಪ್ಪ ಯಾವೊತ್ತೂ ಕೈಗೆ ದುಡ್ಡು ಕೊಡದೇ ಇರೋರು ಅವೊತ್ತು ಮಾತ್ರ ತಿಳಿಹಸಿರು ಬಣ್ಣದ ಐದು ರೂಪಾಯಿ ಕೊಡೋರು. ಸ್ಟೇಡಿಯಂಗೆ ಹೋಗಿ ಬರಬೇಕಾದರೆ ರಿಕ್ಷಾಗೆ ಬನ್ನಿ ಅಂತ ತಾಕೀತು. ಆ ಐದು ರೂಪಾಯಿ ಸ್ಟೇಡಿಯಂನಲ್ಲಿ ತಿಂಡಿತಿನಿಸಿನ ಹೊಸ ಲೋಕವನ್ನೇ ತೆರೆದಿಡುತ್ತಿತ್ತು. ಉಪ್ಪು ಹಚ್ಚಿದ ಸೇಂಗಾ ಅದಕ್ಕ ಯಾಕ ಖಾರಾಮುರಿ ಅಂತಾರ ಅಂತ ಇವೊತ್ತಿಗೂ ಗೊತ್ತಾಗಿಲ್ಲ. ಹಸರ ಬಟಾಣಿ, ಕೆಂಪು ಬಟಾಣಿ ಸೇಂಗಾ ಮಾರೋರು ತಿರಂಗಾ ಮಾಡ್ತಿದ್ರು. ಸೇಂಗಾ ಮಾರೂ ಬಂಡಿಯೊಳಗ ಸಣ್ಣ ಕುಳ್ಳಿ ಇರ್ತಿತ್ತು. ಅದರೊಳಗ ಬಿಸಿಬಿಸಿ ಕೆಂಡ. ಆ ಕೆಂಡದ ಕೆಳಗಿನ ಸೇಂಗಾ ಬಿಸಿಬಿಸಿ ಗರಿಗರಿ.. ಅಪ್ಪ ಹೊರಗ ಏನೂ ತಿನ್ನಬ್ಯಾಡ್ರಿ ಅಂತ ಹೇಳಿದ್ದು ಆ ಕೆಂಡದ ಹೊಗಿಯೊಳಗ ಹಂಗೇ ಆರಿ, ಹಾರಿ ಹೋಗ್ತಿತ್ತು. ಸೇಂಗಾ ಮಾತ್ರ ನೆನಪಾಗ್ತಿದ್ದವು. ಯಾರು ಏನು ಭಾಷಣ ಮಾಡ್ತಿದ್ರು ಒಂದೂ ಕೇಳತಿರ್ಲಿಲ್ಲ. ನಮ್ಮೆಲ್ಲ ಧ್ಯಾನ ಯವಾಗ ನಮ್ಮ ಸಾಲಿ ಹೆಸರು ಕರೀತಾರ.. ಯವಾಗ ನಾವು ಛಂದಗೆ, ಸಾಲಗೆ ನಿಂತು, ಶಿಸ್ತಾಗಿ ಹಾಡಿ ಮುಗಸೂದು? ಆಮ್ಯಾಲೆ ಬಲೂನು, ಬಾಲು, ಬಬ್ಬಲ್‌ಗಳ ವ್ಯಾಪಾರ ಯವಾಗ ಮಾಡೂದು? ಇಂಥವೇ ಚಿಂತ್ಯಾಗ ಇರ್ತಿದ್ವಿ.

ಒಮ್ಮೆ ಈ ಕ್ರೀಡಾಂಗಣದ ಸಡಗರ ತೀರ್ತಂದ್ರ, ಕೈಯ್ಯಾಗ ರೊಕ್ಕ ಎಷ್ಟದಾವ ಅನ್ನೂ ಚಿಂತಿ ಕಾಡ್ತಿತ್ತು. ಮನೀ ಮುಟ್ಟೂದು ಹೆಂಗ ಅನ್ನೂ ಚಿಂತಿ.. ಅವಾಗೆಲ್ಲ ಸಹಾಯಕ್ಕ ಬರ್ತಿದ್ದುದೇ ಸಹಕಾರ ಪದ್ಧತಿ. ಮೂರು ಮಂದಿ ಗೆಳತಿಯರೆಲ್ಲ ಸೇರಿ, ಮನೀ ಸಮೀಪದ ಜಾಗಕ್ಕ ರಿಕ್ಷಾದಾಗ ಹೋಗೂದು. ಇಲ್ಲಾಂದ್ರ ಸ್ವಲ್ಪ ದೂರದತನಾ ಹರಟಿ ಹೊಡ್ಕೊಂಡು ನಡ್ಕೊಂತ ಹೋಗೂದು. ಮನೀ ಸಮೀಪಿದ್ದಾಗ ರಿಕ್ಷಾ ಹತ್ತೂದು. ಒಟ್ನಾಗ ಅಪ್ಪನ ಕಣ್ಮುಂದ ರಿಕ್ಷಾದಿಂದ ಇಳದ್ರ ಆಗ್ತಿತ್ತು.

ಆಗಸ್ಟ್ ಪಂದರಾದ್ದ ಇನ್ನೊಂದು ನೆನಪು ಅಂದ್ರ ನಮ್ಮಪ್ಪ ನಮ್ಮಮ್ಮನ ಪ್ರೀತಿ. ಅವರ ಜಗಳ ಇರಲಾರದ ದಾಂಪತ್ಯ. ಅಲ್ಲಿ ಅಪ್ಪನಿಗೆ ಗಂಡಸು ಅನ್ನೂ ಅಹಂಕಾರ ಇರ್ಲಿಲ್ಲ. ಅಮ್ಮನಿಗೂ ದುಡೀತಿನಿ ಅನ್ನೂ ದೌಲತ್ತು ಇರ್ಲಿಲ್ಲ. ಆಗಸ್ಟ್ 14ರ ರಾತ್ರಿ ಅಪ್ಪ ಮೂರು ಮಂದಿ ಮಕ್ಕಳ ಸಮವಸ್ತ್ರ ಇಸ್ತ್ರಿ ಮಾಡಿ ಇಡೋರು. ನನ್ನೂ ರಿಬ್ಬನ್ ಸಹ ಇಸ್ತ್ರಿ ಆಗಿರ್ತಿತ್ತು. ಅಮ್ಮನೂ ಕಾಲೇಜಿಗೆ ಹೋಗಬೇಕಿತ್ತು. ಅಪ್ಪನೂ ಆಫೀಸಿಗೆ. ಇಬ್ರೂ ಕೂಡಿ ನಮ್ಮೆಲ್ಲಾರ್ಗಿಗೆ ಸಾಲೀಗೆ ಕಳಸಬೇಕಿತ್ತು. ಮುಂಜೇನೆ 7 ಗಂಟೆಗೆಲ್ಲ ಮನಿ ಖಾಲಿ ಆಗ್ಬೇಕಂದ್ರ ನಸುಕಿನ ನಾಲ್ಕೂವರಿಗೆ ಅಮ್ಮ ಏಳ್ತಿದ್ರು. ಮೊದಲು ಅವರು ರೆಡಿ ಆಗಿ, ನಮಗೆಲ್ಲ ಎಬ್ಬಸತಿದ್ರು. ಅಪ್ಪ ನೀರೊಲಿಗೆ ಬೆಂಕಿ ಹಾಕ್ತಿದ್ರು. ಅಪ್ಪ ನೀರು ಕಾದಾವ ಅಂತ ಹೇಳೂದ್ರೊಳಗ ಅಮ್ಮ ನಮಗೆಲ್ಲ ತಲೀಗೆ ಎಣ್ಣಿ ಹಚ್ಚೋರು. ಮೊದಲು ಗಿರಿಯಣ್ಣನ ಸ್ನಾನ. ಯಾಕಂದ್ರ ಅಂವಾ ಕೇಂದ್ರೀಯ ವಿದ್ಯಾಲಯಕ್ಕ ಹೋಗಬೇಕು. ಊರ ಹೊರಗಿನ ಸಾಲೀಗೆ ಹೋಗಾಕ ಊರಕಿಂತ ಮೊದಲೇ ರೆಡಿ ಆಗಬೇಕಿತ್ತು. ಪಾಪ – ಅದಾದ ಮ್ಯಾಲೆ ಸಂತೀ ಅಣ್ಣ ಮತ್ತು ನಾನು. ನಾವಿಬ್ಬರೂ ಕನ್ನಡ ಸಾಲೀ ಮಕ್ಕಳು. ಲಗೂ ಹೋಗೂದಿದ್ರೂ ನಮ್ಮಣ್ಣ ತಾಸತನಾ ಸ್ನಾನ ಮಾಡಾಂವ. ನಾವು

ಮಾತ್ರ ಸಾಬೂನು ಹಚ್ಕೊಂಡು ನೀರು ಹಾಕೊಳ್ಳು ಬದಲು, ನೀರಿಗೆ ಸಾಬೂನು ಹಾಕಿ, ಸಾಬೂನಿನ ನೀರು ಸುರಕೊಂಡು ಬರೋರು.

ಅಮ್ಮ ಎಲ್ಲಾರಿಗೆ ಸಮವಸ್ತ್ರ ಹಾಕೊಳ್ಳಾಕ ಸಹಾಯ ಮಾಡ್ತಿದ್ರು. ಅಪ್ಪ ಎಲ್ಲರ ಶೂ ಪಾಲಿಶ್ ಮಾಡೋರು. ಅಪ್ಪ ನಮಗ ಶೂ ಹಾಕೂದ್ರೊಳಗ ಅಮ್ಮ ಬಿಸಿ ಹಾಲು ಜೊತಿಗೆ ಬಿಸ್ಕಿಟ್ ಕೊಡೋರು. ಅಷ್ಟರೊಳಗ ಅಪ್ಪ ಎಲ್ಲಾರ ಟವಲ್ ತಂದು ನಮಗ ಕಟಿಂಗ್ ಮಾಡೂಮುಂದ ಹೊದಸೂಹಂಗ ಹೊದಿಸಿ ಹೋಗೋರು. ಇನ್ನ ಅಮ್ಮ ಅಚ್ಚ ಬಿಳಿಯ ಖಾದಿ ಅಥವಾ ಕಾಟನ್ ಸೀರೀನೆ ಉಡೋರು. ಯಾವಾಗಲೂ ಚೆಕ್ಸ್ ಅಥವಾ ಲೈನಿಂಗ್ ಶರ್ಟ್ ಹಾಕೊಳ್ಳು ಅಪ್ಪಾಜಿ ಸೈತ ಅವೊತ್ತು ಖಾದಿದರೆ ಕಾಟನ್ ಬಟ್ಟೆಯ ಬಿಳಿ ಅಂಗೀನೆ ತೊಡೋರು. ಅಮ್ಮ ಅಪ್ಪನ ಬದ್ಧತೆ ನೋಡಿದ್ರ ಒಂಥರಾ ಖುಷಿಯಾಗ್ತಿತ್ತು. ಇಬ್ರೂ ಗೆರಿ ಹೊಡ್ದಂಗ ಕೆಲಸ ಹಂಚಕೊಂಡಿದ್ರು. ಆದ್ರ ಯಾವತ್ತೂ ಯಾರು ಯಾವ ಕೆಲಸ ಮಾಡಬೇಕು ಅಂತ ಮಾತಾಡ್ಕೊಂಡಿರ್ಲಿಲ್ಲ. ಅವರಿಬ್ಬರೂ ಒಟ್ಟ ಮಕ್ಕಳ ಕೆಲಸ ಅಂತ ಮಾಡ್ಕೊಂತ ಇರ್ತಿದ್ರು. ಈಗ ಯಾವುದು ಯಾರ ಕೆಲಸ ಅಂತ ನಿರ್ಧಾರ ಮಾಡೂದ್ರೊಳಗ ಜಗಳ ಶುರು ಆಗಿರ್ತಾವ. ಅವರಿಬ್ಬರ ಪರಸ್ಪರ ಅವಲಂಬನೆ, ಪರಾವಲಂಬನೆಯಾಗಿರಲಿಲ್ಲ. ಇಬ್ಬರೂ ತಮ್ಮ ಕೆಲಸಕ್ಕ ತೋರಿಸುವ ಶ್ರದ್ಧೆ, ತಮ್ಮ ಕೆಲಸದೊಳಗ ತೋರಸ್ತಿದ್ದ ಪ್ರೀತಿ ಈಗ ವಿಚಾರ ಮಾಡಿದ್ರ, ಖರೇ ಅಲ್ಲ ಎಷ್ಟು ಜೀವಂತಿಕೆ ಇತ್ತು ಅವರೊಳಗ ಅನಸ್ತದ.

ಈಗ ನಾವೂ ಅಪ್ಪ-ಅಮ್ಮ ಆಗೀವಿ. ಮಕ್ಕಳೂ ಆಗ್ಯಾವ. ಆದ್ರ ಯಾವ ಮಕ್ಕಳೂ ನಮಗ ಭಾಷಣ ಬರದುಕೊಡು ಅಂತ ಕಾಡಿಲ್ಲ. ನಾವು ಅವರ ಸಮವಸ್ತ್ರ ಇಸ್ತ್ರಿ ಮಾಡಿಲ್ಲ. ಅಸಲು ಅವರ ವ್ಯಾನ್ ಕರ್‍ಯಾಕ ಬರಾಂಗಿಲ್ಲ ಅನ್ನೂ ಕಾರಣಕ್ಕ ಇವು ಧ್ವಜವಂದನೆಯ ಖುಷಿನ ಅನುಭವಿಸಿಲ್ಲ. ನಾವೂ ಸಾಲಿ ಮಾಸ್ತರ್ ಆಗಿಲ್ಲ ಅನ್ನೂ ಕಾರಣಕ್ಕ ಒಂದಿನ ಸೂಟಿ ಸಿಗೂದಿಲ್ಲ. ಓಟಿ ಸಿಗ್ತದ. ಆದ್ರ ಬಿಳೀ ಸೀರಿನೆ ಉಟ್ಟು, ಝುಂಡಾ ವಂದನೆ ಮಾಡಲೇಬೇಕು ಅನ್ನೊ ಉಮ್ಮೇದು ನಮಗೇನೂ ಇಲ್ಲ. ಅಪ್ಪ ರೇಡಿಯೋದಾಗ ಪ್ರಧಾನಿ ಭಾಷಣ ಕೇಳ್ತಿದ್ರು. ನಾವು ಟಿವಿಯೊಳಗ ಯಾವ ಹೊಸ ಪಿಕ್ಚರ್ ಹಾಕಬಹುದು ಅಂತ ರಿಮೋಟ್ ಹಿಡ್ಕೊಂಡು ತಡಕಾಡ್ತೀವಿ.

ಅವಾಗಿನ್ಹಂಗ ಅಂಗಿ ಜೇಬಿಗೊಂದು ಝುಂಡಾ ಚುಚ್ಕೊಳ್ಳೂದಿಲ್ಲ. ಕಾರಿಗೊಂದು ಧ್ವಜಾ ಸಿಗಸೂದಿಲ್ಲ. ಟ್ರಾಫಿಕ್‌ನಾಗ ಧ್ವಜ ಮಾರುವ ಹುಡುಗರು ಬಂದಾಗ ತಿರಂಗಾದತ್ತ ಕಣ್ಣು ಹೊರಳೂದಿಲ್ಲ. ಸಿಗ್ನಲ್ ದೀಪದ ಕಡೆಗೆ ಕಣ್ಣಿಟ್ಟು ಕುಂತಿರ್ತೀವಿ. ಎಲ್ಲಿಯೂ 'ಸಾರೇ ಜಹಾಂಸೆ ಅಚ್ಛಾ' ಹಾಡು ಕೇಳಾಂಗಿಲ್ಲ. ಭಾಳಷ್ಟು ಹುಡುಗರಿಗೆ 'ಹಿಂದ್ ದೇಶಕೆ ನಿವಾಸಿ ಸಭಿ ಜನ್ ಏಕ್ ಹೈ' ಹಾಡೂ ಗೊತ್ತಿಲ್ಲ. ತಾತ್ಪರ್ಯನೂ ಗೊತ್ತಿಲ್ಲ. ಸ್ವಾತಂತ್ರ್ಯ ಸಿಕ್ಕೇದ ಅನ್ನೂದೇನೋ ಖರೆ. ಆದ್ರ ಅದನ್ನ ಅದೇ ದೇಶಭಕ್ತಿ ಮತ್ತು ನಿಷ್ಠೆಯಿಂದ ಆಚರಿಸಬೇಕು ಅನ್ನೊ ಹುಮ್ಮಸ್ಸೇ ಕಡಿಮಿ ಆಗೇದ. ಸಾಲಿಯೊಳಗೂ ಅಷ್ಟೆ. ಅವಾಗ ಸಂಗೀತದ ಟೀಚರ್ ಇರ್ತಿದ್ರು. ಸಾಲಿ ಶುರು ಆದಾಗಿನಿಂದ ಹಾಡು ಹೇಳಿಕೊಡ್ತಿದ್ರು. ಯಾರರೆ ಹೆಜ್ಜಿ ಹಾಕೂದು ಕಲಸ್ತಿದ್ರು. ಇನ್ನು

ಕೋಲಾಟ, ಲೇಜಿಂ ಡಂಬಲ್ಸ್‌ಗಂತೂ ಪಿಟಿ ಮಾಸ್ತರ್ ಹೇಳಿಕೊಡ್ತಿದ್ರು. ಈಗ ಸೀಡಿಯೊಳಗ ಹಾಡು ಹಾಕೂದದ. ಕೋರಿಯೋಗ್ರಾಫರ್ ಹೇಳದ್ಹಂಗ ಮೈ ಬಳಕಸೂದದ. ಇವರೊಳಗಿನ ಧ್ವನಿ ಹೊರಗ ಬರಲಾರದೆ ದೇಶ ಭಕ್ತಿ ಉಕ್ಕೂದರೆ ಹೆಂಗ? ಪ್ರತಿ ಸಲ ಸ್ಟೇಡಿಯಂನಾಗ ಮಕ್ಕಳು ಸಿದ್ಧ ಹಾಡಿಗೆ ಕುಣದ್ಯಾಡು ಮುಂದೆಲ್ಲ ಹಿಂಗ ಅನಸ್ತದ. ಆದ್ರ ಉತ್ತರಾ ಹೇಳೋರು ಯಾರ್ರೀ?

ಅಗಸ್ಟ್ ಪಂದರಾ ಅಂದ್ರ ಸ್ವಾತಂತ್ರ್ಯೋತ್ಸವ ಅನ್ನೂ ಖುಷೀನ ಹೋಗೇದ. ಆ ಹೆಮ್ಮೆ, ಹೆಗ್ಗಳಿಕೆನ ಉಳಿದಿಲ್ಲ. ಅಪ್ಪ-ಅಮ್ಮನ ನಡುವೆ ಇದ್ದ, ಅವರು ಅವರ ಕೆಲಸದ ಬಗ್ಗೆ ಇದ್ದ ಶ್ರದ್ಧೆನೂ ನಮ್ಮಲ್ಲಿ ಇಲ್ಲ. ಹಂಗಾರ ನಾವು ಇದನ್ನೆಲ್ಲ ಕಳಕೊಳ್ಳಾಕತ್ತೀವಿ? ಗೊತ್ತ ಆಗೂದಿಲ್ಲ. ಇವು ನೆನಪು ಕದಡದ್ಹಂಗ ಕಳಕೊಂಡಿದ್ದು ಗೊತ್ತಾಗ್ತದ. ಆದ್ರ ಅದನ್ನೇ ಗಳಸೂದು ಗೊತ್ತಾಗೂದಿಲ್ಲ... ಯಾರಿಗೆ ಕೇಳೂನು?

---

## ನಾಯಿ ಮುಖ

ಸೋಮು ಹುಡುಗಿನ ನೋಡೋಕೆ ಹೋಗಿದ್ದ. ಸೋಮು ಹುಡುಗಿ ಒಪ್ಪೋ ಮೊದಲೇ ಹುಡುಗಿ ಮನೆಯವರೆಲ್ಲ ಒಂದೇ ಮನಸ್ಸಿನಿಂದ ಅವನನ್ನು ಒಪ್ಪಿಕೊಂಡರು. ಮನೆ ಮಂದಿಯಾದಿಯಾಗಿ ಸೋಮುನ ಹೊಗಳಿದ್ದೂ ಹೊಗಳಿದ್ದೇ. ಸೋಮು ಮುಖ ಅವರೆಲ್ಲರಿಗೂ ತುಂಬಾ ಇಷ್ಟವಾಯಿತಂತೆ. ನನ್ನ ಮುಖದಲ್ಲಿ ಅಂಥಾದ್ದೇನಿದೆ ಅಂತ ಸೋಮುಗೆ ಆಶ್ಚರ್ಯ. ಮದುವೆಯಾಗುವವರೆಗೂ ಕುತೂಹಲ ಹಿಡಿದಿಟ್ಟು ಕೊಂಡಿದ್ದು ಪ್ರಥಮ ರಾತ್ರಿ ಹೆಂಡತಿ ರೂಮೊಳಗೆ ಬಂದಾಗ "ನಿಮ್ಮನೆಯವರೆಲ್ಲ, ನಿನ್ನನ್ನೂ ಸೇರಿಸಿ, ನನ್ನನ್ನು ನೋಡಿದ ಮೊದಲನೇ ದಿನಾನೇ ನನ್ನಲ್ಲಿ ಏನು ಕಂಡು ಅಷ್ಟೊಂದು ಸಂತೋಷದಿಂದ ಮದುವೆಗೆ ಒಪ್ಕೊಂಡ್ರಿ" ಅಂತ ಕೇಳಿದ್ದಕ್ಕೆ ನವವಧು ನಳಿನ ನಾಚಿ ಹೇಳಿದಳು, "ಓ ಅದಾ, ನಮ್ಮನಲ್ಲಿ ಒಂದು ನಾಯಿ ಇತ್ತು. ಎಲ್ಲರಿಗೂ ಪ್ರಿಯವಾಗಿತ್ತು. ಈಗೊಂದೆರಡು ತಿಂಗಳ ಹಿಂದೆ ಅದು ಸತ್ತು ಹೋಯ್ತು. ಅದನ್ನು ನಮಗ್ಯಾರಿಗೂ ಮರೆಯೋಕೇ ಆಗ್ತಿಲ್ಲ. ನಿಮ್ಮ ಮುಖ ಥೇಟ್ ಸತ್ತುಹೋದ ನಮ್ಮನೆ ನಾಯಿ ತರ ಇದೆ" ಅಂದಾಗ ಸೋಮು ಬೆಚ್ಚಿಬಿದ್ದ.

– ಸುಕೇಶವ

# ಅಂದು ಮಾತ್ರ ಫುಲ್ ಸ್ವಾತಂತ್ರ್ಯ

**- ಅನಿತಾ ನರೇಶ್ ಮಂಚಿ**

**ನಾ**ವು ಮಕ್ಕಳಾಗಿದ್ದಾಗ 'ಯಾರಿಗೆ ಬಂತು ಎಲ್ಲಿಗೆ ಬಂತು, ನಲ್ವತ್ತೇಳರ ಸ್ವಾತಂತ್ರ್ಯ' ಅಂತ ಹಿರಿಯರು ಗೊಣಗಾಡಿದರೂ, ನಮಗಂತೂ ಫುಲ್ ಸ್ವಾತಂತ್ರ್ಯ ಸಿಗುತ್ತಿತ್ತು. ಜೋರು ಮಳೆ ಬಂದಿದ್ದಾಗ ಸಿಕ್ಕಿದ ಒಂದೆರಡು ಜುಜುಬಿ ರಜೆ ಮತ್ತು ಮಳೆಗಾಲದ ರಜೆ ಎಂಬ ಹೋಮ್ ವರ್ಕ್ ಪೀಡಿತ ರಜೆ ಬಿಟ್ಟರೆ ಶಾಲೆ ಶುರುವಾದ ಬಳಿಕ ಸಿಗುವ ಹಕ್ಕಿನ ರಜೆ ಇದಾಗಿರುತ್ತಿತ್ತು. ಬೇರೆಲ್ಲ ರಜೆಗಳಲ್ಲಿ ಮನೆಯಲ್ಲೇ ಕುಳಿತೋ, ಗೆಳೆಯರೊಂದಿಗೆ ಆಟ ಆಡುವುದೋ, ಕೆಲವೊಮ್ಮೆ ಆಟ ಜೋರಾಗಿ ಜಗಳವಾಗುವುದೋ ನಡೆಯುತ್ತಿತ್ತು. ಅದನ್ನು ಬಿಡಿಸಲು ಬಂದ ಹಿರಿಯರು ಸುಲಭ ಪರಿಹಾರವಾದ 'ಮನೇಲಿ ಕೂತ್ಕೊಂಡು ಸುಮ್ನೆ ಪಾಠ ಪುಸ್ತಕ ಓದಿ' ಎಂಬ ನರಕದ ಶಿಕ್ಷೆಯನ್ನು ನಮಗೆ ನೀಡಿ ನಿರಾಳವಾಗುತ್ತಿದ್ದರು. ಆದರೆ ಸ್ವಾತಂತ್ರ್ಯದ ದಿನ ಪುಸ್ತಕ ಮುಟ್ಟಲು ಹೇಳಬಾರದು ಎಂಬ ಅಲಿಖಿತ ಕರಾರು ನಮ್ಮ ನಮ್ಮೊಳಗೆ ಮೊದಲೇ ಆಗಿರುತ್ತಿತ್ತು. ಈ ಕಾರಣದಿಂದಾಗೆ ಸ್ವಾತಂತ್ರ್ಯದ ದಿನ ಬಹು ಮಹತ್ವವುಳ್ಳದ್ದಾಗುತ್ತಿತ್ತು.

**ಬ್ಯಾಗಿನ ಭಾರವಿಲ್ಲದ ಹಗುರ ಬೆನ್ನು, ಒಂದು ಕೈಯಲ್ಲಿ ಕೊಡೆ, ಇನ್ನೊಂದು ಕೈಯಲ್ಲಿ ಹೂವಿನ ಗೊಂಚಲು ಅಥವಾ ಬಿಡಿ ಹೂಗಳ ಲಕೋಟೆ ಹೊತ್ತು ಎಂದಿಗಿಂತ ಮೊದಲೇ ಶಾಲೆಯ ಕಡೆಗೆ ಓಡುತ್ತಿದ್ದ ದಿನಗಳನ್ನ ನೆನಪಿಸಿಕೊಂಡಾಗ...**

ಕೊಡಗಿನ ಪುಟ್ಟ ಊರು ಭಾಗಮಂಡಲ. ತಾಯಿ ಕಾವೇರಿಯ ಸಂಗಮ ಸ್ಥಳ. ಊರಿನ ಒಂದು ತುದಿಯಲ್ಲೇ ಇದ್ದಿದ್ದು ನಮ್ಮ ಶಾಲೆ. ಹೆಚ್ಚಿನೆಲ್ಲ ಮಕ್ಕಳು ಸುತ್ತುಮುತ್ತಲಿನ ಹಳ್ಳಿಗಳಿಂದಲೇ ಬರುತ್ತಿದ್ದರು. ಈಗಿನಂತೆ ಯುನಿಫಾರ್ಮ್ ಧರಿಸಬೇಕೆಂಬ ಕಡ್ಡಾಯ ಇಲ್ಲದಿದ್ದುದರಿಂದ ಮನೆಯಲ್ಲಿ ಕಾಡಿ ಬೇಡಿ ಇದ್ದುದರಲ್ಲೇ ಹೊಸ ಅಂಗಿ ಎಂದು ಹೆಸರು ಹೊತ್ತ ಅಂಗಿ ಹಾಕಿಕೊಳ್ಳುತ್ತಿದ್ದೆವು. ಬ್ಯಾಗಿನ ಭಾರವಿಲ್ಲದ ಹಗುರ ಬೆನ್ನು, ಒಂದು ಕೈಯಲ್ಲಿ ಕೊಡೆ, ಇನ್ನೊಂದು ಕೈಯಲ್ಲಿ ಹೂವಿನ ಗೊಂಚಲು ಅಥವಾ ಬಿಡಿ ಹೂಗಳ ಲಕೋಟೆ ಹೊತ್ತು ಎಂದಿಗಿಂತ ಮೊದಲೇ ಶಾಲೆಯ ಕಡೆಗೆ ಓಡುತ್ತಿದ್ದೆವು. ಹೂವುಗಳನ್ನು ಕುರ್ಚಿಯ ಮೇಲೆ ಜೋಡಿಸಿಟ್ಟಿರುತ್ತಿದ್ದ ರಾಷ್ಟ್ರೀಯ ನಾಯಕರ ಫೋಟೋದ ಬದಿಯಲ್ಲಿ ಚೆಂದಕ್ಕೆ ಇಡುತ್ತಿದ್ದೆವು.

ಉಪಾಧ್ಯಾಯರು ಸ್ವಚ್ಛವಾದ ಧ್ವಜವನ್ನು ಅದರ ಪೆಟ್ಟಿಗೆಯಿಂದ ತೆಗೆದು ಧ್ವಜ ಸ್ಥಂಬದ ಬಳಿ ಬರುತ್ತಿದ್ದರು. ಅದರೊಳಗೆ ಮಕ್ಕಳು ತಂದ ಬಿಡಿ ಹೂಗಳನ್ನು ತುಂಬಿ ಕಟ್ಟಿ, ಯಾರು

ಕಂಬ ಹತ್ತುತ್ತೀರಿ ಎಂಬ ಪಂಥಾಹ್ವಾನ ನೀಡುತ್ತಿದ್ದರು. ಹುಡುಗಿಯರು ಅದು ತಮಗೆ ಸಂಬಂಧಿಸಿದ್ದೇ ಅಲ್ಲ ಎಂದು ಕುತೂಹಲದಿಂದ ಹುಡುಗರ ಕಡೆ ಕತ್ತೆತ್ತಿ ನೋಡುತ್ತಿದ್ದರು.

ಗುಂಪಿನಿಂದ ಕೆಲವು ಹುಡುಗರು ಸಾರ್ ನಾನು, ಸಾರ್ ನಾನು, ಎಂದು ಕೈ ಎತ್ತುತ್ತಾ ಮುಂದೆ ಬರುತ್ತಿದ್ದರು. ಈಗ ನಾವು ರಾಮಾಯಣದಲ್ಲಿ ಓದಿದ ಸಮುದ್ರೋಲ್ಲಂಘನದ ಹತ್ತು ಯೋಜನ ದೂರ, ಇಪ್ಪತ್ತು ಯೋಜನ ದೂರ ಎಂದೆಲ್ಲ ಹಾರಿದ ನಮ್ಮ ಪೂರ್ವಿಕರ ನೆನಪು ಮರುಕಳಿಸುತ್ತಿತ್ತು. ಕೆಲವು ಹುಡುಗರು ಕಂಬದ ಮೇಲೆ ಒಂದು ಕಾಲಿಡುತ್ತಲೇ ಜಾರುವಿಕೆಯ ಅನುಭವವಾಗಿ ಮರಳಿದರೆ, ಮತ್ತೆ ಕೆಲವರು ಅರ್ಧ ಹತ್ತಿ ಅಲ್ಲಿಂದ ಕೆಳಗಿಳಿಯುತ್ತಿದ್ದರು. ಅಂತೂ ಇಂತೂ ಯಾರಾದರು ಒಬ್ಬ ಹನುಮಂತ ಗುಂಪಿನಲ್ಲಿ ಇದ್ದೇ ಇರುತ್ತಿದ್ದ. ಅವನನ್ನು ಎಲ್ಲರೂ ಮೆಚ್ಚುಗೆಯ ನೋಟ ಬೀರಿ ನೋಡುತ್ತಿದ್ದರೆ, ಉಪಾಧ್ಯಾಯರು ಧ್ವಜದ ಕೇಸರಿ ಬಣ್ಣ ಮೇಲೆ ಬರುವಂತೆ ಹೇಗೆ ಕಟ್ಟಬೇಕೆಂದು ಸಾರಿ ಸಾರಿ ಹೇಳುತ್ತಿದ್ದರು. ಹತ್ತಿದ ವಿದ್ಯಾರ್ಥಿ ಅಂತೆಯೇ ಕಟ್ಟಿ ಕೆಳಗಿಳಿದು ಹೀರೋ ಆಗುತ್ತಿದ್ದ. ಅಲ್ಲಿಗೆ ಮೊದಲ ಅಧ್ಯಾಯ ಮುಗಿಯುತ್ತಿತ್ತು.

ಸ್ವಲ್ಪ ಹೊತ್ತಿಗೆ ಶಾಲಾ ಗಂಟೆ ಬಾರಿಸುತ್ತಿತ್ತು. ಮಳೆಯ ದಿನಗಳಾದ್ದರಿಂದ ಅಲ್ಲಿಯವರೆಗೆ ಬೆಳಗ್ಗಿನ ಪ್ರಾರ್ಥನೆ ತರಗತಿಗಳಲ್ಲೇ ನಡೆಯುತ್ತಿತ್ತು. ಆ ದಿನ ಶಾಲಾ ಅಂಗಳದಲ್ಲಿ ಸಾಲಾಗಿ ನಿಲ್ಲುತ್ತಿದ್ದೆವು. ಜಾರುತ್ತಿರುವ ಅಂಗಳದಲ್ಲಿ ನಡೆಯುವುದೇ ಒಂದು ಸಾಹಸ. ಅಡ್ಡಾದಿಡ್ಡಿ ನಿಲ್ಲುತ್ತಿದ್ದ ನಮ್ಮ ಸಾಲು ಸರಿ ಮಾಡಲು ಬರುತ್ತಿದ್ದ ವಿದ್ಯಾರ್ಥಿ ನಾಯಕ ಕೆಲವೊಮ್ಮೆ ಕಾಲು ಜಾರಿ ಬೀಳುತ್ತಿದ್ದ. ಎಲ್ಲರೂ ಹ್ಹೋ ಎಂದು ಬೊಬ್ಬೆ ಹಾಕುತ್ತಿದ್ದರೆ ಗುರುಗಳು ಬೆತ್ತ ಝಳಪಿಸಿ ನಮ್ಮನ್ನು ಸುಮ್ಮನಿರಿಸುತ್ತಿದ್ದರು.

ಪ್ರಾರ್ಥನೆಯ ಬಳಿಕ ಊರ ಹಿರಿಯರು ಧ್ವಜಾರೋಹಣ ನಡೆಸುತ್ತಿದ್ದರು. ಧ್ವಜ ಅರಳಿ ಹೂವೆಲ್ಲ ಕೆಳಗೆ ಚೆಲ್ಲುವಾಗ ಧ್ವಜ ವಂದನೆ ಮಾಡುತ್ತಿದ್ದೆವು. ಅದೂ ಎಲ್ಲ ಒಟ್ಟಿಗೆ ಮಾಡದೆ ಮಳೆ ನಿಂತ ನಂತರ ನೀರ ಹನಿ ಟಪ್ ಟಪ್ ಎಂದು ಒಂದೊಂದಾಗಿ ಬೀಳುವಂತೆ ಆಗೊಮ್ಮೆ ಈಗೊಮ್ಮೆ ಕಾಲೆತ್ತಿ ಹಾಕಿ ಸೆಲ್ಯೂಟ್ ಮಾಡುತ್ತಿದ್ದೆವು. ಗುರುಗಳು ಸಾಕು.. ಸಾಕು.. ಎಂದು ಗದರಿದ ನಂತರ ಎಲ್ಲರೂ ಶಾಲೆಯ ದೊಡ್ಡ ಹಾಲ್‌ನಲ್ಲಿ ಸೇರುತ್ತಿದ್ದೆವು. ಎಲ್ಲಾ ಮಕ್ಕಳು ಅದರೊಳಗೆ ತುಂಬಿ ಜೇನುನೊಣಗಳಂತೆ ಗದ್ದಲವೆಬ್ಬಿಸುತ್ತಿದ್ದೆವು.

ಸ್ಟೇಜಿನ ಮೇಲೆ ಉಪಾಧ್ಯಾಯರು, ಅತಿಥಿಗಳೊಂದಿಗೆ ಆಸೀನರಾಗುತ್ತಿದ್ದಂತೆ ನಮ್ಮೆಲ್ಲರ ಬಾಯಿ ಮಾತು ಕಳೆದುಕೊಳ್ಳುತ್ತಿತ್ತು. ಇಂತಹ ದಿನಗಳಿಗೆ ಶಾಲೆಯಲ್ಲಿ ಧ್ವನಿವರ್ಧಕದ ವ್ಯವಸ್ಥೆ ಇರುತ್ತಿತ್ತು. ಅದನ್ನು ಕೈಯಲ್ಲಿ ಹಿಡಿದು, ಬೆರಳಿನಿಂದ ಹೊಡೆದು ಸುಮಾರು ಬಾರಿ ಹಲೋ, ಹಲೋ ಎಂದು ಹೇಳಿ, ಅದರ ಪೆಟ್ಟಿಗೆಯ ಮೂತಿ ತಿರುವಿ, ಸುಮಾರು ಸರ್ಕಸ್ ಮಾಡಿದ ನಂತರ ಕಿವಿ ತೂತು ಬೀಳುವಂತೆ 'ಗುಂಯ್' ಎಂಬ ದೊಡ್ಡ ಶಬ್ಧದೊಂದಿಗೆ ಅದು ಸರಿಯಾಗುತ್ತಿತ್ತು.

ಸನ್ಮಾನ್ಯ ಅಧ್ಯಕ್ಷರೇ, ಪೂಜ್ಯಗುರುಗಳೇ, ಇಲ್ಲಿ ನೆರೆದಿರುವ ವಿದ್ಯಾರ್ಥಿ, ವಿದ್ಯಾರ್ಥಿನಿಯರೇ ಎಂಬ ಸಿದ್ಧ ಫಾರ್ಮುಲಾದ ಭಾಷಣಗಳು ಪ್ರಾರಂಭವಾಗಿ, ಎಷ್ಟನೇ

ಸ್ವಾತಂತ್ರ್ಯೋತ್ಸವ ಎಂಬುದು ಮಾತ್ರ ಬದಲಾವಣೆಯಾಗಿ ಮತ್ತುಳಿದಂತೆ ಕಳೆದ ವರ್ಷದ ಭಾಷಣಗಳೇ ಪುನರುಚ್ಚರಿಸಲ್ಪಡುತ್ತಿದ್ದವು. ಮಹಾತ್ಮ ಗಾಂಧಿ, ನೆಹರು ಬಿಟ್ಟರೆ ಬೇರಾರು ಆಗ ಸ್ವಾತಂತ್ರ್ಯ ತಂದುಕೊಡುತ್ತಿರಲಿಲ್ಲ. ಕೆಲವೊಮ್ಮೆ ಅಪರೂಪಕ್ಕೆ ತಿಲಕರು, ಗೋಖಲೆಯವರೂ, ವಲ್ಲಭ ಬಾಯಿ ಪಟೇಲರೂ, ಸ್ವಾತಂತ್ರ್ಯ ತಂದುಕೊಡಲು ಸಹಾಯ ಮಾಡುತ್ತಿದ್ದರು.

ಅವರೆಲ್ಲರ ಭಾಷಣ ಮುಗಿದ ನಂತರ ಮಕ್ಕಳ ಭಾಷಣ ಸ್ಪರ್ಧೆ ಪ್ರಾರಂಭವಾಗುತ್ತಿತ್ತು. ಎಲ್ಲರೂ ಮೊದಲೆ ಭಾಷಣಗಳನ್ನು ಬಾಯಿಪಾಠ ಮಾಡಿ ಸಿದ್ಧರಾಗಿರುತ್ತಿದ್ದರು. ಆದರೆ ತುಂಬಿದ ಸಭೆ ನೋಡಿದಾಗ ಕೆಲವರಿಗೆ ಸಭಾಕಂಪನವಾಗಿ, ಎಲ್ಲಾ ಸನ್ಮಾನ್ಯರನ್ನು ನೆನೆಸಿಕೊಂಡ ನಂತರದ ಶಬ್ಧ ಜ್ಞಾಪಕ ಬರದೆ ಸ್ವಲ್ಪ ಹೊತ್ತು ಸಭೆಯನ್ನೇ ಮೌನವಾಗಿ ವೀಕ್ಷಿಸಿ ತಲೆ ತಗ್ಗಿಸಿ ಕೆಳಗಿಳಿಯುತ್ತಿದ್ದರು. ಕೆಲವು ಮಕ್ಕಳು ಪೂರ್ಣ ಭಾಷಣ ಮಾಡಿ ಬಹುಮಾನಕ್ಕೆ ಬಾಧ್ಯರಾಗುತ್ತಿದ್ದರು.

ನಂತರ ದೇಶ ಭಕ್ತಿ ಗೀತೆಯ ಸ್ಪರ್ಧೆ. ಇದರಲ್ಲಿ ಹೆಚ್ಚಾಗಿ ಹುಡುಗಿಯರೇ ಭಾಗವಹಿಸಿ ಕಾರ್ಯಕ್ರಮ ಕಳೆಗಟ್ಟಿಸುತ್ತಿದ್ದರು. ಬಹುಮಾನ ಕೊಡಲು ಶಿಕ್ಷಕರಿಗೂ ಹೆಚ್ಚು ತಲೆಬಿಸಿ ಇರುತ್ತಿರಲಿಲ್ಲ. ಕಳೆದ ವರ್ಷ ಮೊದಲ ಬಹುಮಾನ ಗೆದ್ದವಳೇ ಈ ವರ್ಷವೂ ಗೆಲ್ಲುತ್ತಿದ್ದಳು. ಅವಳೆಲ್ಲಾದರು ಪಾಸಾಗಿ ಹೋಗಿದ್ದರೆ ಮಾತ್ರ ಬೇರೆಯವಳಿಗೆ ಬಹುಮಾನ ಸಿಗುತ್ತಿತ್ತು.

ಇದಾದ ನಂತರ ಎಲ್ಲಾ ಮಕ್ಕಳು ಕಾಯುತ್ತಿರುವ ಸಿಹಿ ತಿಂಡಿ ವಿತರಣೆ ಎಂಬ ಅಮೃತಗಳಿಗೆ ಬರುತ್ತಿತ್ತು. ಮತ್ತೊಮ್ಮೆ ಎಲ್ಲರೂ ಸರತಿಯ ಸಾಲಿನಲ್ಲಿ ಅಂಗಳದಲ್ಲಿ ನಿಲ್ಲುತ್ತಿದ್ದೆವು. ಪ್ರತಿ ಕ್ಲಾಸಿನ ಲೀಡರ್ ಆಯಾಯ ತರಗತಿಗೆ ಸಿಹಿ ಹಂಚುತ್ತಿದ್ದ. ನಾವು ನಮ್ಮ ಕೈಗೆ ಸಿಕ್ಕಿದ ಮಿಠಾಯಿಗಳನ್ನು ಜಾಗ್ರತೆಯಿಂದ ಹಿಡಿದುಕೊಳ್ಳುತ್ತಿದ್ದೆವು.

ಇಷ್ಟಾದ ಬಳಿಕ ಮೆರವಣಿಗೆ ಎಂಬ ಕೊನೆಯ ಘಟ್ಟಕ್ಕೆ ತಲುಪುತ್ತಿದ್ದೆವು. ಎಲ್ಲರಿಗಿಂತ ಮುಂದೆ ವಿದ್ಯಾರ್ಥಿ ನಾಯಕ ಕೈಯಲ್ಲಿ ಒಂದು ಧ್ವಜ ಹಿಡಿದು ಹೆಮ್ಮೆಯಿಂದ ನಿಂತಿರುತ್ತಿದ್ದ. ಅವನ ಹಿಂದಿನಿಂದ ಸಾಲಾಗಿ ಉಳಿದೆಲ್ಲ ಮಕ್ಕಳ ಸರತಿಯ ಸಾಲು. 'ಬೋಲೋ ಭಾರತ್ ಮಾತಾ ಕಿ.. ಜೈ..' 'ಮಹಾತ್ಮಾ ಗಾಂಧೀ ಕಿ.. ಜೈ..' 'ಜವಾಹರ್ ಲಾಲ್ ನೆಹ್ರೂ ಕಿ.. ಜೈ..' ಎಂಬೆಲ್ಲ ಘೋಷಣೆಗಳೊಂದಿಗೆ ನಮ್ಮ ಸವಾರಿ ಸಾಗುತ್ತಿತ್ತು.

ಪೇಟೆಯ ಇಕ್ಕೆಲಗಳಲ್ಲಿ ಜನರೆಲ್ಲ ನಮ್ಮನ್ನು ಉತ್ಸಾಹದಿಂದ ವೀಕ್ಷಿಸುತ್ತಿದ್ದರು. ದೇವಸ್ಥಾನಕ್ಕೆ ಒಂದು ಸುತ್ತು ಬಂದು ಮರಳಿ ಶಾಲೆಯ ಕಡೆಗೆ ಮೆರವಣಿಗೆ ಹೋಗುತ್ತಿತ್ತು. ಅಲ್ಲೇ ಹತ್ತಿರ ಮನೆ ಇರುವ ಮಕ್ಕಳೆಲ್ಲ ಮೆರವಣಿಗೆಯಿಂದ ಒಬ್ಬೊಬ್ಬರಾಗಿ ಕಳಚಿ ಮನೆ ಸೇರಿಕೊಳ್ಳುತ್ತಿದ್ದರು. ಶಾಲೆಗೆ ತಲುಪುವಾಗ ಶಿಕ್ಷಕರಲ್ಲದೆ ಬೆರಳೆಣಿಕೆಯಷ್ಟು ವಿದ್ಯಾರ್ಥಿಗಳು ಉಳಿದುಕೊಳ್ಳುತ್ತಿದ್ದರು.

ಹೀಗೆ ಆ ವರ್ಷದ ಸಾತಂತ್ರ್ಯೋತ್ಸವದ ಸಂಭ್ರಮಕ್ಕೆ ತೆರೆ ಬೀಳುತ್ತಿತ್ತು.

✵

# ಭಾರತ 65, ಫುಲ್ ಸೀನಿಯರ್ ಸಿಟಿಝುನ್!

**- ಇ.ಆರ್. ರಾಮಚಂದ್ರನ್**

ಅಜ್ಜಿ ಟಿವಿ ನೋಡುತ್ತಿದ್ದವರು ಯಾಕೋ ಡಲ್ ಆದ್ರು.

'ಯಾಕಜ್ಜಿ! ಮೂಡ್ ಔಟ್ ಆಗಿದೀಯ ಇವತ್ತು?'

'ಅಲ್ವೋ! ಇನ್ನು ಸ್ವಲ್ಪ ದಿನಕ್ಕೆ ನಮಗೆ ಸ್ವಾತಂತ್ರ ಬಂದು 60 ವರ್ಷದ ಮೇಲಾಗುತ್ತಲ್ವಾ...?'

'65 ಅಜ್ಜಿ! ನಮ್ಮ ದೇಶ ಫುಲ್ ಸೀನಿಯರ್ ಸಿಟಿಝುನ್!'

**ಈ ಅಜ್ಜಿಗೆ ಪಾಲಿಟೀಷಿಯನ್ಸ್ ಎಲ್ಲಾ ಪೋಲಿ-ಟೀಷಿಯನ್ಸ್ ತರಹ ಏಕೆ ಕಾಣುತ್ತಾರೆ?**

'ಸೀನಿಯರ್ ಸಿಟಿಝುನ್ ಮತ್ತು ಸ್ವಾತಂತ್ರ! ಬೆಂಗಳೂರಿನಲ್ಲಿ ಹಾಡು ಹಗಲಲ್ಲೇ ಸೀನಿಯರ್ ಸಿಟಿಝುನ್ ಮನೆಗೆ ನುಗ್ಗಿ ತಲೆ ಒಡ್ದು ಎಲ್ಲಾ ದೋಚಿಕೊಂಡು ಹೋಗ್ತಾರೆ! ಸೀನಿಯರ್ ಸಿಟಿಝುನ್ ವಾಕಿಂಗ್ಗೆ ಹೋದ್ರೆ ಆಸಾಮಿ ಮನೆಗೆ ವಾಪಸ್ಸು ಬರ್ತಾರೇಂತ ಗ್ಯಾರಂಟಿ ಇಲ್ಲ. ಯಾರು ಹೊಡೆದು ಹೋಗ್ತಾರೇಂತ ಕೂಡಾ ಗೊತ್ತಾಗಲ್ಲ. ಆಟೋನಾ, ಬಿಎಮ್ಟಿಸಿನಾ ಇಲ್ಲ ಎರಡೂವರೆ ಚಕ್ರವಿರುವ ಲಂಗು ಲಗಾಮಿಲ್ಲದೆ ಓಡುತ್ತಲ್ಲಾ ಟೆಂಪೋ!'

'ಅಜ್ಜಿ! ಯಾಕೆ ಹೀಗೆ ಮಾತಾಡ್ತೀಯ...... ದೇಶಗಳಿಗೆ 65 ವಯಸ್ಸು ದೊಡ್ಡದೇನಲ್ಲಾ..... ಅಮೇರಿಕಾಗೆ 200 ವಯಸ್ಸು ಮೇಲೆ ಆಗಿದೆ ಗೊತ್ತಾ?'

'ಏನು ಇಂಡಿಪೆಂಡೆನ್ಸ್ ಡೇನೋ: ಇದಕ್ಕಾಗಿ ಪಟ್ಟ ಕಷ್ಟ ಈಗ ಯಾರಿಗಾದ್ರೂ ಗೊತ್ತಾ? ದಿನಗಳಿರಲಿ, ವಾರ, ತಿಂಗಳುಗಳು ಉಪವಾಸ ಮಾಡೋವ್ರು. ಗಾಂಧಿ, ನೆಹ್ರು, ರಾಜಾಜಿ ಅವರ ವಿಷಯ ನಾನು ಮಾತಾಡ್ತಿಲ್ಲ, ಸಾಮಾನ್ಯ ಜನರೂ ಉಪವಾಸ ಮಾಡ್ತಿದ್ರು. ಒಂದು ಸರ್ತಿ ನಿಮ್ಮಜ್ಜ ಉಪವಾಸ ಮಾಡಿ ಜೊತೆಗೆ ಪೊಲೀಸಿನವರ ಹತ್ರ ಲಾಠಿ ಏಟು ತಿಂದು ಮೂರು ದಿನ ಮುಲಗುಟ್ತಾನೇ ಮಲಗಿದ್ರು! ರಾಜಾಜಿ ಅಂದ್ರೆ ಜ್ಞಾಪಕ ಬಂತು ನೋಡು... ಯಾವಾಗಲೂ ಕಪ್ಪು ಕನ್ನಡಕ ಹಾಕಿರ್ತಾರಲ್ಲ..... ತಾಮಿಲ್ ನಾಡಿನವರು. ಹೋದ ವರ್ಷ ಶ್ರೀಲಂಕಾದ ವಿರುದ್ಧ ಕೇವಲ ಎರಡು ಘಂಟೆ ಕಾಲ ಉಪವಾಸ ಮಾಡಿದ ವೀರ ನಿಧಿ! ಬೆಳಗ್ಗೆ ಹತ್ತರಿಂದ ಹನ್ನೆರೆಡು ಘಂಟೆಯ ತನಕ ಆತ ಉಪವಾಸ ಮಾಡಿದ್ದನ್ನು ಟಿ.ವಿ.ಲಿ ತೋರಿಸಿದರು. ಕೂಲಿಂಗ್ ಗ್ಲಾಸ್ ಹಾಕಿ ಮದ್ರಾಸ್ ಬೀಚಿನಲ್ಲಿ ಮಂಚದಲ್ಲಿ ಹತ್ತು ದಿಂಬಿನ ಮಧ್ಯೆ

ಮಲಗಿದ್ದಾಗ ಅವರ ಸುತ್ತಲೂ ಕೂಲರ್ ಇಟ್ಟಿದ್ದರು! ಇದೆಂಥಾ ಉಪವಾಸವೋ! ನಾಚಿಗ್ಗೇಡು. ಅಲ್ಲಿಂದ ಎದ್ದು ಸೀದಾ ಊಟಕ್ಕೆ ಹೋಗಿರಬೇಕು.'

'ಹೌದಜ್ಜಿ! ಇದನ್ನು ಎಲ್ಲಾರೂ ನೋಡಿದ್ರು. ನಗೆಪಾಟಲಾಯ್ತು.'

'ನಮ್ಮಲ್ಲೇ ನೋಡು. ಬರಪೀಡಿತ ಜನರಿಗೆ ಪುನರ್ವಸತಿ ಇನ್ನೂ ಸರಿಯಾಗಿ ಮಾಡಿಲ್ಲ. ಸುಮಾರು ಮಕ್ಕಳು ಪೌಷ್ಠಿಕ ಆಹಾರವಿಲ್ಲದೆ ಪೀಚು ಪೀಚಾಗಿ ಬೆಳೆದಿದ್ದಾರೇಂತ ಯೂನಿಸೆಫ್ ಹೊಡಕೋಳ್ತಾ ಇದೆ. ಆದ್ರೂನು ನಮ್ಮ ಲೀಡರ್ರು ಹೊಸ ಸಿಎಮ್, ಡೆಪ್ಯುಟಿ ಸಿಎಮ್ ಆರಿಸ್ಬೇಕೂಂತ ಒಂದು ವಾರ ಫೈ-ಸ್ಟಾರ್ ಹೋಟೆಲ್ನಲ್ಲಿ 'ಊ ಮ್ ಹೇ' ಮಾಡ್ತಾ ಇದ್ದರಲ್ಲ..! ಇದಕ್ಕಿಂತ ನಾಚಿಕೆ ವಿಷಯ ಬೇರೆ ಏನು ಬೇಕು? ಇದಕ್ಕೇನೆ ನಮಗೆ ಸ್ವಾತಂತ್ರ ಸಿಕ್ಕಿದ್ದು? ಬರ್ತಡೇ ಪಾರ್ಟಿನೇ ಹತ್ತಿಪ್ಪತ್ತು ಸಲಾ ಮಾಡ್ತಾರಲ್ಲೋ!'

'ಹೌದು. ಇದನ್ನು ದೇಶವೇ ನೋಡಿ ನಗೋಹಾಗೆ ಆಯ್ತು..'

'ಆವಾಗ ಉಳುವವನಿಗೆ ಹೊಲ ಕೊಡಿಸಬೇಕೂಂತ ವಿನೋಭಾ ಭಾವೆ ಉಪವಾಸ ಮಾಡಿ, ಬಿರ್ಲಾ, ಟಾಟಾ ತರಹ ಉದ್ಯೋಗಪತಿಗಳನ್ನು ಹಿಡಿದು ಅವರ ಜಮೀನನ್ನು ದಾನ ಮಾಡುವ ಹಾಗೆ ಮಾಡ್ಲಿಲ್ವೇ? ದೇಶದಲ್ಲಿ ಆಗ ಭೂ ದಾನ ಮಾಡೋದಕ್ಕೆ ಜನ ರೆಡಿಯಾಗಿ ಬಂದ್ರು. ಈಗ ಇರೋ ಪೋಲಿ-ಟೀಷಿಯನ್ಸ್ ಡೀನೋಟಿಫಿಕೇಷನ್ನು ಮಣ್ಣು ಮಸೀಂತ ಹೇಳಿ ಗವರ್ನಮೆಂಟ್ ಭೂಮಿಯನ್ನೇ 'ಭೂ ಸ್ವಾಹ' ಮಾಡ್ತಾರಲ್ಲಾ!'

'ಹ ಹ ಅಜ್ಜಿ! ನೀನು ಪಾಲಿಟೀಷಿಯನ್ಸ್‌ಗೆ ಪೋಲಿ-ಟೀಷಿಯನ್ಸ್ ಅಂತ ಯಾಕೆ ಕರೀತಿಯಾ?'

'ಅವ್ರು ಮಾಡೋ ಕೆಲಸಗಳಿಂದ ಅವರ ಹೆಸರು ಈಗ ಚೇಂಜ್ ಆಗಿದೆ ಕಣೋ! ಇನ್ನೊಂದು ವಿಷಯ...'

'ಏನದು ಅಜ್ಜಿ?'

'ಆಗ ನಮಗೆ ಸ್ವಾತಂತ್ರ ಇರಲಿಲ್ಲ, ನಿಜ. ದುಡ್ಡೂ ಕಾಸು ಬರ್ತಿದ್ದು ಕಡಿಮೇನೇ.. ಇದ್ದದ್ದರಲ್ಲಿ ಜನ ಸುಖವಾಗಿದ್ರು. ಸ್ಕೂಲಲ್ಲಿ 'ಆನೆಸ್ಟಿ ಈಸ್ ದಿ ಬೆಸ್ಟ್ ಪಾಲಿಸಿ' ಅಂತ ಕಲಿಸಿದ್ದನ್ನು ಅಕ್ಷರತಹ ಪಾಲಿಸೋವ್ರು. ಕಳ್ರು ಇರ್ಲಿಲ್ಲ ಅಂತಾ ಅಲ್ಲ, ಆಗಲೂ ಇದ್ರು. ಆದ್ರೆ ಈಗ ನೋಡು. ದಿನಬೆಳಗಾದ್ರೆ, ಎಲ್ಲೆಲ್ಲೂ ರೈಡು! 'ಸರ್ಕಾರದ ಕೆಲಸ ದೇವರ ಕೆಲಸ' ಅಂತ ಬರೆದಿರೋ 'ಬೋರ್ಡನ್ನು ದಿನಾ ಓದ್ತಾ, ಒಂದೇ ಊರಲ್ಲಿ ನಾಲ್ಕೈದು ಸೈಟು, ನಾಲ್ಕು ತಲೆಮಾರಿಗೆ ಬೇಕಾಗುವಷ್ಟು ಚಿನ್ನ, ಬೆಳ್ಳಿ, ಮನೇ ತುಂಬಾ ಲಂಚದ ನೋಟುಗಳು! ಯಾರಿಗಾದ್ರೂ ನ್ಯಾಯವಾಗಿ ಬರುವ ಸಂಬಳದಲ್ಲಿ ಇಷ್ಟೆಲ್ಲಾ ಕೊಂಡುಕೊಳ್ಳೋದಕ್ಕೆ ಸಾಧ್ಯವಾ? ಲೂಟಿ ಮಾಡಕ್ಕೆ ಸ್ವಾತಂತ್ರ ಸಿಕ್ಕಿದ್ದಾಗೆ ಆಯ್ತು ನೋಡು.'

'ನಿಜ ಅಜ್ಜಿ!'

'ಕಾಯಕವೇ ಕೈಲಾಸ' ಅಂದ್ರು ಬಸವಣ್ಣ... ಈಗ 'ಕರಪ್ಷನ್ನೇ ಕಾಯಕ!' 'ಕರಪ್ಷನ್ನೇ ಕರೆಕ್ಟು' ಅಂತಾರೆ. ದುಡ್ಡು ಹೊಡಿಯೋದಕ್ಕೆ ಸ್ವಾತಂತ್ರ ಬಂದ ಹಾಗೆ ಆಯ್ತು. ಮೊನ್ನೆ

ಪುರಾಣಕ್ಕೆ ಹೋದಾಗ ನಮ್ಮ ಸಾಫ್ಟ್‌ವೇರ್ ಸೀತಮ್ಮ ಹೇಳ್ತಿದ್ರು, ಇಂಡಿಪೆನ್ಡೆನ್ಸ್ ಬಂದಾಗಿನಿಂದ ಲಂಚವಿಲ್ಲದೆ ನಾವು ಯಾವ ಸಾಮಾನು ತೊಗೊಂಡಿಲ್ಲಾಂತ. ಪ್ಲೇನು, ಗನ್ನು, ಶಿಪ್ಪು ತೊಗೋಳ್ಳುವಾಗೆಲ್ಲಾ ಲಂಚವೇ ಅಂತೆ! ಆಗ ಬೋಫೋರ್ಸ್‌ನಲ್ಲಿ ದುಡ್ಡು ಹೊಡೆದ್ರೆ ಈಗ ಸ್ಪೆಕ್ಟ್ರಂನಲ್ಲಿ ಹೊಡೀತಾರಂತೆ! ಸ್ವಾತಂತ್ರ ಸ್ಕ್ಯಾಮಿನ ಸರಮಾಲೆ ತಂದಿದೆ ಅಂತಾರೆ.'

'ನಿನ್ನ ಫ್ರೆಂಡ್ ಸೀತಮ್ಮ ಪರವಾಗಿಲ್ಲ. ಒಳ್ಳೇ ಸರಕೇ ಇಟ್ಟಿದ್ದಾರೆ.'

'ಮುಂಚೆಯೆಲ್ಲಾ ಸ್ವಾತಂತ್ರಕ್ಕೆ ಹೋರಾಡಿದವರನ್ನ ಅಂಡಮಾನ್ಗೆ ಕಳಿಸೋವ್ರು. ಈಗ ಸ್ವಾತಂತ್ರ ಬಂದಮೇಲೆ ಲಂಚ ಹೊಡೆಯೋವ್ರಿಗೇ ಸುಮಾರು ಜೈಲುಗಳು ಕಟ್ಬೇಕಾಗುತ್ತೆ. ಪರಪ್ಪನ ಅಗ್ರಹಾರ, ತಿಹಾರ್, ಎರ್ವಾಡಾ ಅಂಥವು ಇನ್ನೂ ನೂರೋ, ಇನ್ನೂರೋ ಕಟ್ಸಿದ್ರೆ ಉಪಯೋಗಕ್ಕೆ ಬರುತ್ತೆ ನೋಡು.'

'ಹ ಹ ಅಜ್ಜಿ.'

'ಕೊನೇ ಪಕ್ಷ ಇವರ್ನೆಲ್ಲಾ ಒಳಗೆ ಹಾಕಿದ್ರೆ ಆವಾಗ ನಿಜವಾದ ಸ್ವಾತಂತ್ರ ಬಂದ ಹಾಗೆ ಆಗುತ್ತೆ.'

'ನಿಜ ಅಜ್ಜಿ, ಸರಿಯಾಗಿ ಹೇಳ್ದೆ.'

✵

---

### ಬಾಡಿಗೆ ಬಾಕಿ

ಸ್ವಂತ ಮನೆಯಿದ್ದೂ ಬಾಡಿಗೆ
ಮನೆಯಲ್ಲಿದ್ದವರು
ಖುಷಿಯಿಂದ ಗುನುಗುತ್ತಿದ್ದರು
ಅಲ್ಲಿರುವುದು ನಮ್ಮನೆ
ಇಲ್ಲಿರುವುದು ಸುಮ್ಮನೆ

### 24 x 7

ಗುಣಗಾನ ನಡೆಸಿದ್ದ ಮನೆ ಕೊಡಿಸಿದ Broker
ಕರೆಯಬೇಕಿವನನ್ನು Joker
24 ಗಂಟೆ Running Water ಅಂದಿದ್ದ
ಅದು
24 ಗಂಟೆ Running for Water !
ಆಗಿತ್ತು

- ನಂ. ನಾಗರಾಜ್


# ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು ತುಂತುರು

**– ದಂನಳ**

- ಯಡ್ಯೂರಪ್ಪನವರು ಮೊದಲು ಸದಾನಂದ ಗೌಡರನ್ನು ***ನೋಟಿಫೈ*** ಮಾಡಿ ನಂತರ ***ಡಿನೋಟಿಫೈ*** ಮಾಡಿದ ಮೇಲೆ ಜಗದೀಶ್ ಶೆಟ್ಟರನ್ನು ***ನೋಟಿಫೈ*** ಮಾಡಿದರು. ಈಗಿವರು ಯಾವಾಗ ***ಡಿನೋಟಿಫೈ*** ಆಗುತ್ತಾರೋ...?
- ವರುಣ ಯಡ್ಯೂರಪ್ಪನವರ ತರಹ ಮುನಿಸಿಕೊಂಡಿಲ್ಲದಿದ್ದರೆ ಈ ವೇಳೆಗೆ ಸದಾನಂದ ಗೌಡರೇ ಕೆ.ಆರ್.ಎಸ್.ನಲ್ಲಿ ಬಾಗಿನ ಕೊಟ್ಟು ಹೋಗುತ್ತಿದ್ದರು. ಈಗ ಶೆಟ್ಟರ್‌ಗಾದರೂ ಆ ಕೆಲಸ ಮಾಡುವ ಹಾಗಾಗಲಿ ಎಂದು ಜನಗಳ ಪ್ರಾರ್ಥನೆ.
- ಸಿಎಂ ಒಂದು ಕಬ್ಬಿಣದ ಅಂಗಡಿ ನಡೆಸಿದರೆ ಯಾವ ನೊಣಾನೂ ಬರಲ್ಲ, ಬೆಲ್ಲದ ಅಂಗಡಿ ನಡೆಸಿದರೆ ಓಕೆ.
- ಯಶಸ್ಸು ಕರೆಯದೇ ಬರುವ ಅತಿಥಿಯಲ್ಲ.
- *Our constant effort to be happy is making us miserable.*

**ಮೆಲುಕು ಹಾಕುವಂತಹ ಮಾತುಗಳ ಗುಚ್ಛ**

- 'ಊರಿಗೆ ಬಂದವಳು ನೀರಿಗೆ ಬಾರದಿರುವಳೆ' ಕಾಲ ಹೋಯಿತು. ಈಗ 'ಚಾಟ್ ಮಾಡಲು ಬಂದವಳು ಮೀಟ್ ಮಾಡಲು ಬರದಿರುತ್ತಾಳೆಯೆ' ಎಂದು ಹೇ(ಕೇ)ಳಬೇಕು.
- 'ನನ್ನ ಬಳಿ ಸಿ.ಜಿ.ಎಚ್.ಎಸ್. ಇದೆ' ಎಂದು ಕೇಂದ್ರ ನೌಕರ ಹೇಳಿದರೆ, ಖಾಸಗಿ ನೌಕರ 'ನನ್ನ ಬಳಿ ಮೆಡಿಕ್ಲೈಮ್' ಎಂದಾಗ 'ನನ್ನ ಬಳಿ ನರ್ಸಿಂಗ್ ಹೋಮ್ ಇದೆ' ಎಂದವನು ಡಾಕ್ಟರ ಮಗನೇ ಇರಬೇಕು. ಅಲ್ಲವೆ?
- *Football is chess at high speed.*
- ನಿಮ್ಮನ್ನು ಕಂಡರೆ ಅಸೂಯೆ ಪಡುವವರನ್ನು ದ್ವೇಷಿಸಬೇಡಿ. ಅವರನ್ನು ಇಷ್ಟಪಡಿ. ಏಕೆಂದರೆ ಅವರ ದೃಷ್ಟಿಯಲ್ಲಿ ನೀವು ಅವರಿಗಿಂತ ಉತ್ತಮರು!
- ಪಾಪಗಳಿಂದ ಮುಕ್ತಿ ಪಡೆಯಬೇಕಾಗಲು ಉಪವಾಸ ಮಾಡಬೇಕಿಲ್ಲ ಬದಲಿಗೆ ಮತ್ತೆ ಪಾಪ ಮಾಡಬಾರದಿದ್ದರೆ ಸರಿ.
- *Kerala does not create jobs; it only creates job-seekers.*
- ಒಳ್ಳೆಯವರಿಗೆ ಕೆಟ್ಟದ್ದಾಗುತ್ತದೆ ಎಂಬ ಮಾತಿದೆ. ನಿಜ. ಆದರೆ ನಾನು ಇಷ್ಟಪಡದವರಿಗೆ ಒಳ್ಳೆಯದಾಗುವುದನ್ನು ನಾನು ಸಹಿಸಲಾರೆ.
- ಕಷ್ಟದಲ್ಲಿರುವಾಗಲೂ ನಗುನಗುತಾ ಇರುವವರ ಬಗ್ಗೆ ಎಚ್ಚರದಿಂದಿರಿ. ಏಕೆಂದರೆ ಅವರು ಈಗಾಗಲೇ ಯಾರ ಮೇಲೋ ಗೂಬೆ ಕೂರಿಸಲು ನಿರ್ಧರಿಸಿರಬೇಕು.
- *The only person, who is with us our entire life, is ourselves.*
- *GOK* ಎಂದರೆ ಗವರ್ನಮೆಂಟ್ ಆಫ್ ಕರ್ನಾಟಕ ಎಂದೂ ಆಗುತ್ತ ಗಾಡ್ ಓನ್ಲಿ ನೋಸ್ ಎಂದೂ ಆಗುತ್ತೆ. ಅರೆ! ಎರಡೂ ಒಂದೇ ಆಗಲಿಲ್ಲವೆ?




Since 1998
**Whisper Hearing Aids**
Pvt. Ltd.
1030/13, 25 main, 39 cross,
4th 'T' block, Jayanagara, Bengaluru


SIEMENS
Authorised Hearing Care Centre


Avail **FREE** supply of batteries for a year on purchase of hearing aids for this week.
10am - 1:30pm, 5pm - 8pm
Appointment : 26640571, 9741765454

**ಕಿವಿ – ಕೇಳುವ ಅಂಗವೇ ಆದರೂ ಅದರ ಒಂದು ಭಾಗ ನಮ್ಮ ದೇಹದ ಸಮತೋಲನ ಮಾಡುವ ಕೆಲಸ ನಿಭಾಯಿಸುತ್ತದೆ. ಕೇಳಿಸುವ ಭಾಗಕ್ಕೆ ತೊಂದರೆಯಾದರೆ ಕಿವುಡುತನ ಬರುತ್ತದೆ, ಹಾಗೆಯೇ ಉಳಿದ ಭಾಗಕ್ಕೆ ತೊಂದರೆಯಾದರೆ ತಲೆಸುತ್ತು ಕಿವಿಮೊರೆತ ಉಂಟಾಗುತ್ತದೆ. ಕಿವಿಮೊರೆತಕ್ಕೆ ಉಳಿದಂತೆ ಹಲವಾರು ಕಾರಣಗಳು ಇದ್ದರೂ ಈ ಸೂಕ್ಷ್ಮವಾದ ಅಂಗದ ತೊಂದರೆಯೇ ಬಹುಮಟ್ಟಿನ ಕಾರಣ. ಬಹಳ ಸಲ ಈ ತೊಂದರೆ ಔಷಧಿಗೆ ಒಗ್ಗದು. ಮೊರೆತ ಮುಚ್ಚುವಂತೆ ಶಬ್ದವನ್ನು ಹಿಯರಿಂಗ್ ಏಡ್ ಮೂಲಕ ಕೊಡಬೇಕಾಗುತ್ತದೆ. ಸದ್ಯಕ್ಕೆ ಅದೇ ಉತ್ತರ. ಕಿವಿಯ ಸೂಕ್ಷ್ಮತೆ ಕಡಿಮೆಯಾದ ನಂತರ ಹಿಯರಿಂಗ್ ಏಡ್ ಧರಿಸಿ ಎಲ್ಲರಂತೆಯೇ ಮಾತಿನ ಚಟುವಟಿಕೆಯಲ್ಲಿ ಭಾಗವಹಿಸಬೇಕು, ಅದು ಸಾಮಾನ್ಯ ಜೀವನ.**

**ಡಾ|| ಜಿ. ಪುರುಷೋತ್ತಮ ಇಡಿ.ಡಿ.**
**ವಾಕ್ – ಶ್ರವಣದೋಷ ತಜ್ಞ, ವಿಸ್ಪರ್ ವಾಕ್ – ಶ್ರವಣ ಕೇಂದ್ರ**


ಬಸವನ ಹುಳು ಒಲಿಂಪಿಕ್ಸ್
ಆಗಸ್ಟ್ ೨೦೧೨ - ಜೂನ್ ೨೦೧೪








ಏನ್ ಸಾರ್ ಟೇಬಲ್ ಮೇಲೆ ಹೀಗೆ ಕರೆ ಮಾಡಿದ್ದೀರಾ..?




ಒಂದು ಹೊಸ ಸ್ಪರ್ಧೆ – ಹಾವಾಡಿಗರಿಗೆ




ಈ ಒಲಿಂಪಿಕ್ಸ್‌ನಲ್ಲಿ ಒಂದಿಬ್ಬರು ಬಾಯ್ ಫ್ರೆಂಡ್ಸ್‌ನ ಗೆಲ್ಲೋದಿಕ್ಕೆ ನಾನು ಪ್ರಯತ್ನಿಸುತ್ತೇನೆ. ನೀನು

# ಕೊರವಂಜಿ ಅಪರಂಜಿ ಟ್ರಸ್ಟ್

ಆಯೋಜಿಸಿರುವ

# ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆ 2012

**ನಾಡಿನ ಪ್ರಖ್ಯಾತ ನಗೆಬರಹಗಾರ ಪಡುಕೋಣೆ ರಮಾನಂದರಾವ್ ಸ್ಮಾರಕ ನಗೆ ಲೇಖನ ಸ್ಪರ್ಧೆಯನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಆಯೋಜಿಸಿದೆ. ಸ್ಪರ್ಧೆಯ ನಿಯಮಗಳು ಹೀಗಿವೆ.**

1. ಒಬ್ಬರು ಒಂದು ಲೇಖನವನ್ನು ಮಾತ್ರ ಕಳುಹಿಸಬೇಕು
2. ಲೇಖನ ಫುಲ್‌ಸ್ಕೇಪ್ ಹಾಳೆಯಲ್ಲಿ 3 ರಿಂದ 4 ಪುಟಗಳಿರಬೇಕು.
3. ಉತ್ತಮವಾದ ನಗೆಲೇಖನಕ್ಕೆ ಪ್ರಥಮ (ರೂ.1000/-), ದ್ವಿತೀಯ (ರೂ.750/-) ಹಾಗೂ ಮೂರನೇ (ರೂ.500/-) ಬಹುಮಾನಗಳಿರುತ್ತವೆ.
4. ಬಹುಮಾನಿತ ಲೇಖನಗಳನ್ನು ಅಪರಂಜಿ ವಿಶೇಷಾಂಕದಲ್ಲಿ ಪ್ರಕಟಿಸಲಾಗುವುದು.
5. ತೀರ್ಪುಗಾರರ ಮೆಚ್ಚುಗೆ ಪಡೆದ ನಗೆ ಲೇಖನಗಳನ್ನು ಅಪರಂಜಿಯಲ್ಲಿ ಕ್ರಮೇಣ ಬಳಸಿಕೊಳ್ಳಲಾಗುವುದು.
6. ಸ್ಪರ್ಧೆಗೆ ಯಾವುದೇ ಪ್ರವೇಶ ಶುಲ್ಕವಿಲ್ಲ, ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ ಹಾಗೂ ಲೇಖನಗಳನ್ನು ವಾಪಸ್ ಕಳುಹಿಸಲಾಗುವುದಿಲ್ಲ.
7. ಲೇಖನಗಳನ್ನು : ಬೇಲೂರು ರಾಮಮೂರ್ತಿ, ಉಪಸಂಪಾದಕರು, ಅಪರಂಜಿ, 'ಸುಕೇಶವ' ನಂ. 96, 2ನೇ ಅಡ್ಡ ರಸ್ತೆ, 20ನೇ ಮುಖ್ಯ ರಸ್ತೆ, ಬಿ.ಟಿ.ಎಂ. ಬಡಾವಣೆ 1ನೇ ಹಂತ, ಬೆಂಗಳೂರು - 560 068 ಈ ವಿಳಾಸಕ್ಕೆ ಕಳುಹಿಸಬೇಕು.
8. ಲೇಖನಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ 31.10.2012.

# ಜಲಿಯನ್‌ವಾಲಾ-ಬೆಂಗ್ಳೂರ್ ಸ್ಟೈಲ್

- ಸಿ.ಆರ್. ಸತ್ಯ

**ಭಾ**ರತಕ್ಕೆ ಸ್ವಾತಂತ್ರ್ಯ ಬರುವುದಕ್ಕೆ ಮುನ್ನ ನಡೆದ ಜಲಿಯನ್‌ವಾಲಾ ಘಟನೆ ಮರೆಯಲು ಸಾಧ್ಯವೇ? ಸ್ವಾತಂತ್ರ್ಯ ಸಂಗ್ರಾಮಕ್ಕೆ ನಿರಾಯುಧರಾಗಿ ನಿಂತ ದೇಶ ಭಕ್ತರನ್ನು ಬ್ರಿಟಿಷರು ಗುಂಡಿಟ್ಟುಕೊಂದರು. ಇಂತಹ ಘಟನೆ ಬೆಂಗ್ಳೂರಿನಲ್ಲೂ ಇತ್ತೀಚೆಗೆ ಆಯ್ತು ಅಂತ ಅಂದರೆ ನಂಬುತ್ತೀರಾ? ದೇವರ ದಯೆಯಿಂದ ಯಾರು ಯಾರನ್ನು ಗುಂಡಿಟ್ಟು ಕೊಲ್ಲದಿದ್ದರೂ ಒನಕೆಗಳಂತ ಕೋಲುಗಳಿಂದ ಹೊಡೆದ್ದಿದ್ದಂತೂ ನಿಜ. ಇದೆಲ್ಲಾ ಶುರುವಾದದ್ದು ಒಬ್ಬ ಹಿರಿಯ ವ್ಯಕ್ತಿಯಿಂದ. ಸಂಸಾರದಲ್ಲಿ ಬಹುತರಹ ಕಷ್ಟಗಳನ್ನು ಅನುಭವಿಸಿ ನೊಂದ ಈ ಜೀವಿ (ಅವರು ಯಾರು ಅಂತ ಆಮೇಲೆ ನಿಮಗೆ ಗೊತ್ತಾಗುತ್ತೆ!) ತಮ್ಮ ಬಂಧನದಿಂದ ಸ್ವಾತಂತ್ರ್ಯ ಗಿಟ್ಟಿಸಿಕೊಳ್ಳಬೇಕೆಂದು, ತಮ್ಮಂತಹವರೇ ಆದ ಇನ್ನಷ್ಟು ನೂರು ಮಂದಿ ಜನರನ್ನು ಸೇರಿಸಿಕೊಂಡು, ನಮ್ಮ ಪ್ರಸಿದ್ಧ ವೀರಾಂಜನೇಯ ದೇವಸ್ಥಾನದಲ್ಲಿರುವ ಭೋಜನ ಶಾಲೆಯಲ್ಲಿ, ಆಗಸ್ಟ್ 15ರಂದು, ಸಭೆ ಸೇರಿಸಿದರು. ಈ ಭೋಜನ ಶಾಲೆಗೆ ನಾಲ್ಕು ದಿಕ್ಕುಗಳಲ್ಲೂ ನಾಲ್ಕು ಚಿಕ್ಕ ಬಾಗಿಲುಗಳಿವೆ. ಹಳೇ ಕಾಲದ ಬಾಗಿಲುಗಳಾದ್ದರಿಂದ, ಚಿಲಕಗಳು ಬಹು ಗಟ್ಟಿಮುಟ್ಟಾಗಿವೆ.

> ಭೋಜನಶಾಲೆಯಲ್ಲಿ ಅದೆಂತಹಾ ಚೀತ್ಕಾರ!
> ಅದೇನು ಪರದಾಟ!
> ಹೊರಗೆ ಹೋಗೋಕ್ಕೆ ಬಾಗಿಲೂ ಬ್ಲಾಕ್!
> ಬೆನ್ನಿಗೆ ಮೇಲಿಂದ ಮೇಲೆ ಏಟು!
> ಬಾವುಟ ಡೌನ್!
> 'ಗಾಂಧಿ' ಸಿನಿಮಾದ ಸೀನಿಂದೇ ತದ್ರೂಪು!

ಸರಿ, ನಮ್ಮ ಹಿರಿಯರು ಭಾವೋದ್ರೇಕರಾಗಿ ಎಲ್ಲರನ್ನೂ ಉದ್ದೇಶಿಸಿ ಮಾತನಾಡಿದರು. ವಿಶೇಷವೆಂದರೆ, ಅಲ್ಲಿ ನೆರೆದಿದ್ದವರೆಲ್ಲರೂ ಗಂಡಸರೇ! ಎಲ್ಲರ ಮುಖಗಳೂ ಸೊರಗಿದ ಸೋರೆಕಾಯಿಗಳಂತಿದ್ದವು.

"ನನ್ನ ಮಿತ್ರರೇ, ಸಹೃದಯಿಗಳೇ, ನೊಂದ ಜೀವಿಗಳೇ....., ಇಂದು ಭಾರತ ಭಾರತವೇ ಸ್ವಾತಂತ್ರ್ಯ ದಿನಾಚರಣೆ ಎಂದು ಸಂಭ್ರಮದಿಂದ ಕುಣೀತಿದೆ. ಕಂಬಗಳ ಮೇಲೆಲ್ಲಾ ಬಾವುಟಗಳನ್ನೇರಿಸಿ, ಭಾರತ ಮಾತಾ ಕೀ ಜೈ ಎಂದು ಜನರೆಲ್ಲಾ ಹರ್ಷೋದ್ಗಾರ ಮಾಡ್ತಿದಾರೆ. ಎಂತಹ ವಿಪರ್ಯಾಸ! ಇಲ್ಲಿ ನೆರದಿರುವ ನಾವು ಇನ್ನೂ ನಮ್ಮ ಸಂಸಾರಗಳಿಗೆ ಬಂದಿಗಳಾಗಿ, ನಮ್ಮ ಮನೆಯಾಕೆಯರ ಆಧಿಪತ್ಯದಲ್ಲಿ ನಮ್ಮ ವೈಯಕ್ತಿಕ ಸ್ವಾತಂತ್ರ್ಯವನ್ನೆಲ್ಲಾ ಕಳೆದುಕೊಂಡು, ಬೆಳಗಿನಿಂದ ರಾತ್ರಿಯ ತನಕ ಹಿಯಾಳಿಸಿಕೊಳ್ಳುತ್ತಾ, ಒಂದು ಕಪ್ಪು ಕಾಫಿಗೂ

ಬೇಡಿಕೊಳ್ಳುತ್ತಾ, ಪರಪ್ಪರ ಅಗ್ರಹಾರದ ಜೀವನವನ್ನು ನಡೆಸ್ತಾ ಇದೀವಿ – ಅದೂ ನಮ್ಮ ಸ್ವಂತ ಮನೆಗಳಲ್ಲೇ! ರೆಕ್ಕೆ ಪುಕ್ಕ ಆಡಿಸದಂತಹ ಜೀವನ ಜೀವನವೇ? ಮದುವೆಯಾಗುವಾಗ, ಪುರೋಹಿತರ ಬಾಯಲ್ಲಿ ತಾನು ಹೆಂಡತಿ ಅಂತ ಶಾಸ್ರೋಕ್ತವಾಗಿ ಅನ್ನಿಸಿಕೊಂಡಾಕ್ಷಣ, ಆಕೆ ಬ್ರಿಟಿಷ್ ಮಹಾರಾಣಿಯ ತರಹ ಸರ್ವಾಧಿಕಾರ ಉಳ್ಳವಳಾಗುತ್ತಾಳೆಯೆ? ವಿಕ್ಟೋರಿಯಾ ರಾಣಿ ಕೂಡ ಎಲ್ಲರ ಜೀವನದಲ್ಲಿ ಅನಾವಶ್ಯಕವಾಗಿ ಮೂಗು ಹಾಕುತ್ತಿದ್ದಳು ಎಂಬ ದಾಖಲೆಗಳಂತೂ ಇಲ್ಲ, ಹಾಗಿದ್ದಲ್ಲಿ, ನಮ್ಮ ಹೆಂಡತಿಯರು ತಾವುಗಳು ಯಾವ ರಾಣಿಯರು ಅಂತ ತಿಳ್ಕೊಂಡಿದ್ದಾರೆ? ನಮ್ಮ ದಿನ ನಿತ್ಯ ಚಟುವಟಿಕೆಗಳನ್ನೆಲ್ಲಾ – ಯಾಕೆ ನಮ್ಮ ಉಸಿರಾಟವನ್ನೆಲ್ಲಾ – ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡಿರುವ ಈ ಹೆಂಗಸರು ನಮ್ಮ ಜೀವನ ಸುಖಕ್ಕೆ ಕಳಂಕ ತರುತ್ತಿದ್ದಾರೆ.''

''ನಿಜ! ನಿಜ!!'' ಅಂತ ಯಾರೋ ಇನ್ನೊಬ್ಬ ನೊಂದವರು – ಕೈಚಪ್ಪಾಳೆ ತಟ್ಟಿದರು. ಸರಿ, ಎಲ್ಲರೂ ಅವರನ್ನು ಅನುಮೋದಿಸಿದರು. ಹಿರಿಯ ಮಿತ್ರರು ಮುಂದುವರಿಸಿದರು: ''ನಮ್ಮ ಗತಿ ಏನಾಗ್ತಿದೆ? ನಮ್ಮನ್ನು ಬೆಳಿಗ್ಗೆ ಹಾಲು ತರೋದರಿಂದ ಹಿಡಿದು, ಬಿ.ಬಿ.ಎಂ.ಪಿ.ಗೆ ಕಸ ಕೊಡೋದು, ನಾಯಿಗೆ ವಾಕಿಂಗ್ ಮಾಡಿಸೋದು, ಬಿಲ್ಲು ಕಟ್ಟೋದು, ಆಟೋರಿಕ್ಷಾ ತಂದು ಕೊಡೋದು, ಟಿ.ವಿ.ಚಾನಲ್ ಚೇಂಜ್ ಮಾಡೋದು, ಹಳೇ ಪೇಪರ್ರುಗಳನ್ನು ಜೋಡಿಸೋದು (ಇಂಗ್ಲಿಷ್ ಬೇರೆ, ಕನ್ನಡ ಬೇರೆ), ಕೆಲಸದವಳು ಬರದೇ ಇದ್ದರೆ ಅವಳಿಗೆ ಕೊಡೋತರಹ ನಮಗೂ ಕೊಟ್ಟ ನೀರು ಕಾಫಿ ಕುಡಿದು ಮನೆ ಕೆಲಸ ಮಾಡಿಸೋದು, ಮಳೆ ಹನಿ ಬಿದ್ದರೆ ಓಡಿ ಹೋಗಿ ಹರವಾಕಿದ್ದ ಬಟ್ಟೆಗಳನ್ನ ಒಳಕ್ಕೆ ತರೋದು – ಇವೆಲ್ಲಾ ನಾವು ಮಾಡುವಂತಹ ಕೆಲಸಗಳೇ? ನಮಗೇನು ಹೊರಗಡೆ ಹೋಗಿ ಸ್ನೇಹಿತರ ಜೊತೆ ಹರಟೆ ಕೊಚ್ಚೋಕ್ಕೆ ಆಸೆ ಇಲ್ಲವೆ? ಇಸ್ಪೀಟ್ ಆಡೋಕ್ಕೆ ನಮಗೆ ಮೂಲ ಭೂತ ಹಕ್ಕಿಲ್ಲವೇ? ಸಂಜೆ, ಟೂ ಬೈತ್ರೀ ದೋಸೆ ತಿಂದು ಕಾಫಿ ಕುಡಿಯೋ ಚಪಲ ಇಲ್ಲವೆ?''

''ಉಂಟು! ಉಂಟು!!'' ಅಂತ ನೆರೆದಿದ್ದವರೆಲ್ಲಾ ಆವೇಶದಿಂದ ಕೂಗಿದ್ರು, ವೈಬ್ರೇಷನ್‌ನಿಂದ ಅಂತ ಕಾಣುತ್ತೆ, ರಾಮಾಂಜನೇಯನ ವಿಗ್ರಹದ ಎಡ ಭಾಗದಿಂದ ಒಂದು ಹೂವಿನ ಹಾರ ಕೆಳಕ್ಕೆ ಬಿತ್ತು, ಹಿರಿಯ ಮಿತ್ರರ ಭಾಷಣ ಈ ಘಟ್ಟಕ್ಕೆ ಬರೋ ಹೊತ್ತಿಗೆ ಭೋಜನಶಾಲೆಯ ಪೂರ್ವ, ಪಶ್ಚಿಮ, ಉತ್ತರ ಬಾಗಿಲುಗಳನ್ನು ಯಾರೋ ಹೊರಗಡೆಯಿಂದ ಚಿಲಕಗಳನ್ನು ಬಡಿದು ಮುಚ್ಚಿದ್ರು. ಇದು ನಮ್ಮ ಸತ್ಯಾಗ್ರಹಿಗಳ ಕಣ್ಣುಗಳಿಗೆ ಬೀಳಲೇ ಇಲ್ಲ, ಗದ್ಗದ ಕಂಠದಿಂದ ನಮ್ಮ ಹಿರಿಯ ಮಿತ್ರರು ಮುಂದುವರಿಸಿದರು: ''ನಮ್ಮ ಪರಿಹಾರಕ್ಕೆ ಯಾವ ಕೋರ್ಟ್ ತಾನೆ ಇದೆ? ನಮ್ಮ ಸಹಾಯಕ್ಕೆ ನಮ್ಮ ಮಕ್ಕಳು ಮರಿಗಳು ಎಲ್ಲಿವೆ? ಚಿಕಾಗೋಲೋ ಅಟ್ಲಾಂಟಾಲೋ ಕಂಪ್ಯೂಟರ್ ಕುಟ್ಟುವೆ ಅಷ್ಟೇ! ಸರಿ, ನಾನು ಇದುವರೆವಿಗೂ ಹೇಳಿದ ವಿಷಯಗಳೆಲ್ಲಾ ದೈಹಿಕ ಶ್ರಮಕ್ಕೆ ಸಂಬಂಧಪಟ್ಟಿದ್ದು ಅನ್ನಬಹುದು. ಆದರೆ ನಮ್ಮ ಹೆಂಡತಿಯರು ನಮ್ಮನ್ನು ಮಾನಸಿಕವಾಗಿಯೂ ತಿರಸ್ಕಾರ ಮಾಡುತ್ತಿಲ್ಲವೇ?''

''ಹೌದು! ಹೌದು!! ನಿನ್ನೆ ನಾನು ಒಂದು ಕಪ್ಪು ಎಕ್ಸ್‌ಟ್ರಾ ಕಾಫಿ ಕೇಳಿದ್ದಕ್ಕೆ ನನ್ನ ಹೆಂಡತಿ ದಿನಾಪೂರ್ತಿ ಗೊಣಗುತ್ತಿದ್ದಳು'' ಅಂತ ಯಾರೋ ಸೇರಿಸಿದ್ರು. ಇನ್ನೊಬ್ರು ಜೋರಾಗಿ

''ಬನ್ನಿ, ಗಾಂಧೀಜಿ ಉಪ್ಪಿನ ಸತ್ಯಾಗ್ರಹ ಮಾಡಿದ ಹಾಗೆ ನಾವೂ ಒಂದು ಕಪ್ಪಿನ ಸತ್ಯಾಗ್ರಹ ಮಾಡೋಣ. ಕೈನಲ್ಲಿ ಖಾಲಿ ಕಪ್ಪು ಹಿಡಿದುಕೊಂಡು ನಮ್ಮ ಅಡಿಗೆ ಮನೆಗಳ ಕಡೆಗೆ ಪ್ರೊಟೆಸ್ಟ್ ಮಾರ್ಚ್ ಮಾಡೋಣ! ಈ ಹೆಂಗಸರು ಏನು ಮಾಡ್ತಾರೆ ನೋಡೋಣ!'' ಅಂತ ಕೂಗಿದರು.

ಆಗ ಹಿರಿಯ ಮಿತ್ರರು ''ಇರಿ, ಇರಿ! ಈಗ ಈ ಜಾಗ ಬಿಟ್ಟು ಕದಲಬೇಡಿ. ಈಗೊಂದು ನಮಗೆ ಪ್ರಮುಖ ಕೆಲಸವಿದೆ. ಅದು ನಮ್ಮ ಸ್ವಾತಂತ್ರ್ಯದ ಸಾಂಕೇತಿಕ ಬಾವುಟವನ್ನು ಹಾರಿಸೋದು! ಇಲ್ಲೇ, ಈ ಭೋಜನ ಶಾಲೆಯಲ್ಲೇ, ಈ ಮಧ್ಯದ ಕಂಬದಲ್ಲೇ ನಮ್ಮ ಧ್ವಜಾರೋಹಣ ನಡೆಯಲಿ, ಹಾರಲು ಗಾಳಿ ಇಲ್ಲದಿದ್ದರೂ ಪರವಾಗಿಲ್ಲ! ಭಾರತ್ ಪಿತಾಕಿ ಜೈ!'' ಅಂತ ಆದೇಶಿಸಿದರು. ಎಲ್ಲರೂ ಭಾವೋದ್ರೇಕರಾಗಿ ಭಾರತ್ ಪಿತಾಕಿ ಜೈ ಅಂತ ಗಂಟಲು ಕಿತ್ತು ಬರುವ ಹಾಗೆ ಕೂಗುತ್ತಾ ಧ್ವಜ ಸ್ಥಂಭದ ಬಳಿ ನುಗ್ಗಿದರು.

ಟ್ರಾಜಿಡಿ ಅನ್ನೋದು ಯಾವ ಯಾವ ರೀತಿಗಳಲ್ಲಿ ಆಗುತ್ತೆ ನೋಡಿ; ಮೇಲಿನ ಆಗು ಹೋಗುಗಳ ಮಧ್ಯೆ ಹೊರಬಂದ ನಾಲ್ಕು ಅಪಾಯಕರ ಚಿಹ್ನೆಗಳನ್ನು ಯಾರೂ ಗಮನಿಸಲೇ ಇಲ್ಲ!

**ಒಂದು :** ರಾಮಾಂಜನೇಯ ಭೋಜನಶಾಲೆ ಹಾಗೂ ಜಲಿಯನ್‌ವಾಲಾಬಾಗ್ ಎರಡೂ ಒಂದೇ ಆಕಾರದಲ್ಲಿದ್ದು, ಅವಕ್ಕೆ ನಾಲ್ಕು ದ್ವಾರಗಳಿವೆ ಎಂದು.

**ಎರಡು :** ನಾಲ್ಕು ದ್ವಾರಗಳಲ್ಲಿ – ಆಗಲೇ ತಿಳಿಸಿದ ಹಾಗೆ ಮೂರು ಬಾಗಿಲುಗಳನ್ನು ಹೊರಗಿನಿಂದ ಆಗಲೇ ಯಾರೋ ಲಾಕ್ ಮಾಡಿದ್ದರು ಎಂದು.

**ಮೂರು :** ಉಳಿದೊಂದು ದಕ್ಷಿಣದ ತೆರೆದ ಬಾಗಿಲಿನಿಂದ ಸತ್ಯಾಗ್ರಹಿಗಳ ಕಡೆಗೆ ಸುಮಾರು ನೂರು ಸೆಲ್ವಾರ್ ಕಮೀಜ್‌ಗಳು ಕೈನಲ್ಲಿ ಒನಕೆ ಸೈಜ್ ಕೋಲುಗಳನ್ನು (ಎಲ್ಲಿ ಸಿಕ್ತೋ ಏನೋ?) ಹಿಡ್ಕೊಂಡು ಭೋಜನ ಶಾಲೆಗೆ ಭಾರತ ಮಾತಾಕಿ ಜೈ ಅಂತ ಕೂಗ್ತಾ, ಲೆಫ್ಟ್ ರೈಟ್ ಅಂತ ಬ್ರಿಟಿಷ್ ತುಕಡಿಯ ತರಹವೇ ಬಂದಿದ್ದು.

**ನಾಲ್ಕು :** ಈ ಸೆಲ್ವಾರ್ ಕಮೀಜ್ ತುಕಡಿಯ ನಾಯಕಿ ನಮ್ಮ ಹಿರಿಯ ಮಿತ್ರರ ಹೆಂಡತಿಯೇ ಆಗಿದ್ದು, ಅವರ ಮುಖ ಕಾಣದೇ ಇರಲಿ ಅಂತ – ಸೆಲ್ವಾರ್‌ನಲ್ಲಿ ಮುಖ ಮುಚ್ಕೊಂಡಿದ್ದು.

ತುಕಡಿಯ ನಾಯಕಿ – ಸಧ್ಯಕ್ಕೆ ರಾಣಿ ಸಾಹೇಬ ಅನ್ನೋಣ – 'ಪ್ಲೆಟೂನ್ ಸ್ಟಾಪ್' ಅಂತ ಗರ್ಜಿಸಿದರು. ಮಿಕ್ಕೆಲ್ಲಾ ಸ್ತ್ರೀ ಯೋಧರು ದಪ್ಪ್! ಅಂತ ನಿಂತರು. ರಾಣಿ ಸಾಹೇಬ ಪ್ಲೆಟೂನ್ 'ಗೆಟ್ ರೆಡೀ' ಅಂತ ಎರಡನೇ ಗರ್ಜನೆ ಕೊಟ್ಟರು. ಸ್ತ್ರೀ ಯೋಧರು ಕೈನಲ್ಲಿದ್ದ ಕೋಲುಗಳನ್ನು ಸೆಟೆದು ಹಿಡಿದುಕೊಂಡು ನಿಂತರು. ಮನೇನಲ್ಲಿ ಮಾಡೋ ಹಾಗೆ ಮುಖಗಳನ್ನೆಲ್ಲಾ ಸಿಂಡರಿಸಿಕೊಂಡು ಅಗಲಕ್ಕೆ ಕಣ್ಣು ಬಿಟ್ಟರು. ಅಷ್ಟರಲ್ಲಿ ಹಿರಿಯ ಮಿತ್ರರು ಧ್ವಜಾರೋಹಣವನ್ನು ಅರ್ಧಕ್ಕೆ ಮಾಡಿದ್ರು. ಬಾವುಟ ತನ್ನ ಜಾಗಕ್ಕೆ ಹೋಗೋಕ್ಕೆ ಇನ್ನೊಂದು ಹತ್ತು ಅಡಿಗಳಿದ್ದವಷ್ಟೆ. ಮಿಕ್ಕಿದ ಗಂಡಂದಿರೆಲ್ಲಾ ನಾಲ್ಕು ದ್ವಾರದ ಕಡೆಗೆ ಬೆನ್ನು ತಿರುಗಿಸಿ

ಕೊಂಡು ನಿಂತಿದ್ದರಿಂದ ಸೆಲ್ವಾರ್ ಕಮೀಜ್ ಪ್ಲೆಟೂನ್ ಬಂದಿದ್ದು ಅವರಿಗೆ ತಿಳೀಲೇ ಇಲ್ಲ! 'ಪ್ಲೆಟೂನ್ ಜಾರ್ಚ್' ಅಂತ ರಾಣಿ ಸಾಹೇಬ ಮೂರನೇ ಗರ್ಜನೆ ಕೊಟ್ರು ನೋಡಿ, ನೂರು ಮಂದಿ ಸೆಲ್ವಾರ್ ಕಮೀಜ್‌ಗಳೂ ಮಿಂಚಿನಂತೆ ಮುನ್ನುಗ್ಗಿ ಸತ್ಯಾಗ್ರಹಿಗಳ ಬೆನ್ನುಗಳಿಗೆ ಹೇಗೆ ಬಡಿದ್ರೂ ಅಂತೀರಿ! ಅಬ್ಬ, ಸ್ತ್ರೀ ಶಕ್ತಿ ಅನ್ನೋದು ನಾವು ಬರೀ ಸೀರಿಯಲ್‌ಗಳಲ್ಲಿ ನೋಡಿರ್‍ತೀವಿ ಅಷ್ಟೆ – ಅದನ್ನು ನೀವು ನಿಜವಾಗಿ ಕಣ್ಣಲ್ಲಿ ಕಾಣಬೇಕು! ಎಷ್ಟು ಶಿಸ್ತಿನ ತುಕಡಿ ಅಂದರೆ, ತಮ್ಮ ತಮ್ಮ ಗಂಡಂದಿರನ್ನು ಬಿಟ್ಟು ಮಿಕ್ಕವರ ಗಂಡಸರಿಗೆ ಹೊಡಿಲೇ ಬೇಕು ಅನ್ನೋ ನಿಯಮವನ್ನು ಅಕ್ಷರಸಹ ಪಾಲಿಸಿದ್ರು.

ಭೋಜನಶಾಲೆಯಲ್ಲಿ ಅದೆಂತಹಾ ಚೀತ್ಕಾರ! ಅದೇನು ಪರದಾಟ! ಹೊರಗೆ ಹೋಗೋಕ್ಕೆ ಉತ್ತರದ ಬಾಗಿಲೂ ಬ್ಲಾಕ್! ಬೆನ್ನಿಗೆ ಮೇಲಿಂದ ಮೇಲೆ ಏಟು! ಬಾವುಟ ಡೌನ್! ರಿಚರ್ಡ್ ಆ್ಯಂಟನ್‌ಬರೋನ 'ಗಾಂಧಿ' ಸಿನಿಮಾದ ಸೀನಿಂದೇ ತದ್ರೂಪು!

ಕೇವಲ ಹತ್ತು ನಿಮಿಷಗಳಲ್ಲಿ ಬೆಂಗಳೂರಿನ ಜಲಿಯನ್‌ವಾಲಾ ಘಟನೆ ಮುಗಿದೇ ಹೋಯಿತು. ರಾಣಿ ಸಾಹೇಬ ''ಓಪನ್ ದಿ ಡೋರ್ಸ್, ರಿಟ್ರೀಟ್'' ಅಂತ ಕೊನೆ ಗರ್ಜನೆ ಕೊಟ್ಟರು. ಬಾಗಿಲುಗಳನ್ನು ತೆಗೆದು ಸೆಲ್ವಾರ್ ಕಮೀಜ್‌ಗಳೆಲ್ಲರೂ ಅಷ್ಟೇ ಶಿಸ್ತಿನಿಂದ ಮನೆ ಕಡೆ ಮಾರ್ಚ್ ಮಾಡಿ, ಮನೇನಲ್ಲಿ ಬೇಗ ತಮ್ಮ ಉಡಿಗೆಗಳನ್ನು ಸೀರೆ ಬ್ಲೌಸ್‌ಗೆ ಬದಲಾಯಿಸಿಕೊಂಡರು. ಸತ್ಯಾಗ್ರಹಿಗಳೆಲ್ಲಾ ಎದ್ದು ಬಿದ್ದು ಕುಂಟ್ಕೊಂಡು ಮನೆ ಸೇರ್‍ಕೊಂಡ್ರು.

**ಕೊನೆ ಹನಿ:** ನಾನು ಮನೇಗೆ ಬಂದಾಗ ನನ್ನ ಹೆಂಡತಿ ''ಅಲ್ರೀ, ಆ ಬಾವುಟಕ್ಕೆ ಬೆಡ್‌ಶೀಟ್‌ನಿಂದ ಬಟ್ಟೆ ಹರ್‍ಕೊಂಡು ಹೋಗಿದ್ರಲ್ಲಾ. ಕೇಳಿದ್ರೆ, ಒಂದು ಸಾರಿಸೋ ಬಟ್ಟೇನೋ ಏನೋ ನಾನೇ ಕೊಡ್ತಿರಲಿಲ್ವೆ?'' ಅಂತ ಕೇಳಿದಳು. ''ಏನೋ ಆಗಿದ್ದು ಆಗ್ಹೋಯ್ತು ರಾಣಿ ಸಾಹೇಬ, ಒಂದು ಕಪ್ ಕಾಫಿನಾದ್ರೂ ಕೊಡಮ್ಮ. ಕುಡಿದು ಮಲ್ಕೋತೀನಿ. ನೋವು ತಡೆಯೋಕ್ಕೆ ಆಗ್ತಿಲ್ಲ'' ಅಂತ ಬೇಡ್ಕೊಂಡೆ. ಈ ಸಲ ವೀರಾಂಜನೇಯನ ಬಲ ಭುಜದಿಂದ ಹೂವು ಬಿತ್ತೋ ಏನೋ, ಅರ್ಧ ಕಪ್ಪು ನೀರು ಕಾಫಿ ಸಿಕ್ತು!

---

## ಭಕ್ತಿ

ಎರಡು ಪೆಗ್‌ಗಳ<br>
ನಂತರ ಎಲ್ಲರೂ<br>
'ಅಮಲ್' ದಾರರೇ!<br>
'Shake' ದಾರರೇ!

– ನಂ. ನಾಗರಾಜ್

# ರಿಲೇ - ಸುತ್ತಮುತ್ತ

**- ಕೃಷ್ಣ ಸುಬ್ಬರಾವ್**

**ಲಂ**ಡನ್‌ನಲ್ಲಿ ನಡೆಯುವ ಒಲಂಪಿಕ್ಸ್‌ನಲ್ಲಿ ಭಾರತವನ್ನು ಪ್ರತಿನಿಧಿಸುವ ಯಾವ ರಿಲೇ ಟೀಮೂ ಇಲ್ಲವೆಂದು ಪೇಪರ್ ವರದಿ ನೋಡಿ ಬೇಸಾರವಾಯಿತು ಆದರೆ ಆಶ್ಚರ್ಯವೇನು ಆಗಲಿಲ್ಲ. ಕಾರಣ - ಇಬ್ಬರು ಸದಸ್ಯರ ಒಂದು ತಂಡವನ್ನು ಕಳುಹಿಸಲು ಹೆಣಗಾಡಿದ ನಮ್ಮ ದೇಶ (ಟೆನಿಸ್ ಡಬಲ್ ಆಯ್ಕೆ ಬಗ್ಗೆ) ಇನ್ನು ನಾಲ್ಕು ಜನರ ರಿಲೇ ಟೀಮನ್ನು ಕಳುಹಿಸಲು ಯಶಸ್ವಿಯಾಗುವುದಾದರೂ ಹೇಗೆ? ಅದೂ ಉದ್ದೀಪನ ಮದ್ದನ್ನು ಸೇವಿಸಿ ಸಿಕ್ಕಿ ಹಾಕಿಕೊಂಡು ಅನರ್ಹರಾದವರನ್ನು ಬಿಟ್ಟು ನಾಲ್ಕು ಜನರನ್ನು ಆಯ್ಕೆ ಮಾಡುವ ಮಹಾ ಸಂಕಟ ಅರ್ಥಮಾಡಿಕೊಳ್ಳಬೇಕು. ಮಹಿಳಾ ಮಣಿಗಳು ಪುರುಷರಿಗೆ ಯಾವುದರಲ್ಲಿ ಕಮ್ಮಿಯಿಲ್ಲ? ಅದೂ ಯಾವ ದೇಶದವರಿಗೂ ಕಮ್ಮಿಯಿಲ್ಲವೆಂದು ಅಕ್ಕುಂಜಿ, ಜೋಸ್, ಕೌರ್‌ಗಳು ತೋರಿಸಿರುವಾಗ ಅವರ ಒಗ್ಗಟ್ಟನ್ನು ಗೌರವಿಸಬೇಕು. ಇರಲಿ ಬಿಡಿ ರಿಲೇ ಬಿಟ್ಟರೆ ಬೇರೆ ಆಟಗಳಿಲ್ಲವೆ ... ಸೋಲೊದಕ್ಕೆ!

ನಮ್ಮ ದೇಶದ ಒಬ್ಬ ಜವಾಬ್ದಾರಿ ಪ್ರಜೆಯಾಗಿ, ಒಬ್ಬ ಶ್ರೇಷ್ಠ ಸ್ಪೋರ್ಟ್ಸ್ ಮ್ಯಾನ್ (ಶಿಪ್)ನ ಪ್ರತಿನಿಧಿಯಾಗಿ ಆಯ್ಕೆ ಸಮಿತಿಯ ಕಷ್ಟಗಳನ್ನು ಯೋಚಿಸುತ್ತಾ ಕುಳಿತಿರುವಾಗ ಪಕ್ಕದಲ್ಲಿ ಬಿದ್ದಿದ್ದ ಪೇಪರ್‌ನ ದೊಡ್ಡ ಫೋಟೊವೊಂದು ನನ್ನ ಗಮನ ಸೆಳೆಯಿತು. ಚಿತ್ರಕ್ಕಿಂತ ಅದರ ಕೆಳಗಿದ್ದ ಶೀರ್ಷಿಕೆಯ ಆಕರ್ಷಣೆ ಹೆಚ್ಚಾಗಿತ್ತು. ಅದು ಸೌತ್ ಆಫ್ರಿಕಾದ ಅಥ್ಲೇಟ್ ಆಸ್ಕರ್ ಪಿಸ್ಟೋರಿಯಸ್ ಓಡುತ್ತಿರುವ ಫೋಟೊ. ಅವನ ಎರಡು ಕಾಲೂ ಇಲ್ಲ. ಕತ್ತರಿಸಿದ ಕಾಲಿಗೆ ಕಾರ್ಬನ್ ಫೈಬರ್ ಪ್ರೋಥೆಟಿಕ್ ಬ್ಲೇಡ್ಸ್ ಅಳವಡಿಸಲಾಗಿದೆ. ಅವನನ್ನು ''ಬ್ಲೇಡ್‌ರನ್ನರ್'' ಎಂದು ಕರೆಯುತ್ತಾರೆ. ಲಂಡನ್ ಒಲಂಪಿಕ್ಸ್‌ನಲ್ಲಿ ಅವನು ಎರಡು ವಿಭಾಗಗಳಲ್ಲಿ ಸ್ಪರ್ಧಿಸುತ್ತಿದ್ದಾನೆ. ಎರಡು ಕಾಲಿಲ್ಲದೆ ಒಲಂಪಿಕ್ಸ್‌ನಲ್ಲಿ ಟ್ರಾಕ್‌ನಲ್ಲಿ ಓಡುವ ಪ್ರಪ್ರಥಮ ಸ್ಪರ್ಧಿಯಾಗಿ ಗಮನ ಸೆಳೆಯಲ್ಲಿದ್ದಾನೆ. 400 ಮೀಟರ್ ಓಟದಲ್ಲಿ ಆಯ್ಕೆಗೊಂಡ ಆಸ್ಕರ್ ತನ್ನ ದೇಶದವರಿಗೆ ಹಾಕಿದ ಷರತ್ತು ಏನೆಂದರೆ ತಾನು 400X4 ರಿಲೇ ಆಟದಲ್ಲಿ ಆಯ್ಕೆಯಾದಲ್ಲಿ ಮಾತ್ರ ತಾನು ಇಂಡಿವಿಷುಯಲ್ ಸ್ಪರ್ಧೆಯಲ್ಲಿ (400 ಮೀಟರ್ ಓಟ) ಭಾಗವಹಿಸುತ್ತೇನೆ ಇಲ್ಲದಿದ್ದರೆ ಒಲಂಪಿಕ್ಸ್‌ಗೆ ಹೋಗುವುದೇ ಇಲ್ಲ ಎಂದು. ಆಸ್ಕರ್‌ನ ಆತ್ಮಸ್ಥೈರ್ಯ, ಆತ್ಮಾಭಿಮಾನ, ಆತ್ಮವಿಶ್ವಾಸ ಅಷ್ಟು ದೊಡ್ಡದು. ಅದಕ್ಕಿಂತ ದೊಡ್ಡದೆಂದರೆ ಆ ದೇಶ ಅವನನ್ನು ಎರಡೂ ಸ್ಪರ್ಧೆಗೆ ಆಯ್ಕೆ ಮಾಡಿದೆ. ತನಗೆ ಯಾವ ರಿಯಾಯತಿಯೂ ಬೇಡ, ತಾನು ಕಾಲಿದ್ದವರ ಜೊತೆ ಸರಿಸಮಾನವಾಗಿ ಓಡುತ್ತೇನೆ, ದೇಶಕ್ಕಾಗಿ ಓಡುತ್ತೇನೆ, ಪದಕ ಗೆಲ್ಲಲು ನೆರವಾಗುತ್ತೇನೆ ಎನ್ನುವ ಅವನಿಗೆ, ಅವನ ತಂಡಕ್ಕೆ ಹಾರೈಸಲು ಯಾರು ಹಿಂಜರಿಯುತ್ತಾರೆ?

ಎಲ್ಲ ಆಟ ಬಿಟ್ಟು ಕೇವಲ ರಿಲೇ ಆಟದ ಸುತ್ತ ತಿರುಗುತ್ತಿರುವ ನನ್ನ ತಲೆಗೆ (ಯೋಚನೆ) ಕಾರಣ, ಮೊನ್ನೆ ನಾನು ವಾಕಿಂಗ್ ಮಾಡುವ ಪಾರ್ಕಿನಲ್ಲಿ ನಡೆಯುತ್ತಿದ್ದ ಹಿರಿಯ ನಾಗರೀಕರ ಸಂವಾದ ಬಹಳ ಸ್ವಾರಸ್ಯವಾಗಿತ್ತು.

''ನೋಡ್ರಿ, ರಿಲೇ ಆಟ ಬಹಳ ಒಳ್ಳೆ ಪ್ರಾಕ್ಟಿಕಲ್ ಗೇಮ್ ಒಬ್ಬರಿಗೆ ಒಂದು ಸುತ್ತು ಒಂದೇ ಸಮನೆ ಓಡೋದಕ್ಕೆ ಆಗೋದಿಲ್ಲ, ನಾಲ್ಕು ಜನ ಆ ಜವಾಬ್ದಾರಿ ಹಂಚಿಕೊಂಡರೆ ಎಲ್ಲರಿಗೂ ಅನಾಯಾಸವಾಗಿ ಯಶಸ್ಸು ಸಿಗುತ್ತೆ, ಪದಕ ಗಿಟ್ಟಬಹುದು. ಈ ಆಟವೊಂದರಲ್ಲಿ ಸರ್ವರಿಗೂ ಸಮಪಾಲು ಇರುತ್ತೆ. ಎಷ್ಟೋ (ಟೀಮಿನ) ಆಟಗಳಲ್ಲಿ ಕೆಲವರು ಚೆನ್ನಾಗಿ ಆಟವಾಡಿದರೆ ಮತ್ತೆ ಕೆಲವರಿಗೆ ಆಟ ಆಡಲು ಅವಕಾಶವೇ ಸಿಗುವುದಿಲ್ಲ. ಉದಾಹರಣೆಗೆ ಕ್ರಿಕೆಟ್‌ನಲ್ಲಿ ಮೊದಲಿಗರು ಬಹಳ ಚೆನ್ನಾಗಿ ಬ್ಯಾಟಿಂಗ್ ಮಾಡಿ ಬಿಟ್ಟರೆ ಕೊನೆಯಲ್ಲಿ ಉಳಿಯುವವರಿಗೆ ಬ್ಯಾಟಿಂಗ್ ಸಿಗೋದೆ ಇಲ್ಲ. ಫುಟಬಾಲ್, ಹಾಕಿಯಲ್ಲಿ, ಗೋಲು ಹೊಡೆಯುವ ಪರಿಣಿತರಿಗೆ ಹೆಚ್ಚು ಪ್ರಾಮುಖ್ಯತೆ, ಪ್ರಾಶಸ್ತ್ಯ ವಾದದಲ್ಲಿ ಮಧ್ಯೆ ಬಾಯಿ ಹಾಕಿದ ಮತ್ತೊಬ್ಬ ಹಿರಿಯರು ''.....ಅದಕ್ಕಿಂತ ಹೆಚ್ಚಾಗಿ ರಿಲೇ ಆಟದಲ್ಲಿ ಮತ್ತೊಂದು ಅನುಕೂಲವಿದೆ. ಗೆದ್ದರೆ ನಮ್ಮ ಪಾಲಿದೆ ಎಂದು ಬೀಗಬಹುದು. ಸೋತರೆ ಸುಲಭವಾಗಿ ಬೇರೆಯವರ ಹೆಗಲಿನ ಮೇಲೆ ಆರೋಪ ಹೊರಿಸಬಹುದು. ಒಟ್ಟಿನಲ್ಲಿ ಗೆಲುವು, ಸೋಲು ನಮ್ಮ ಕೈ ಅಥವಾ ಕಾಲಿನ ಮೇಲೆ ಇರೋದಿಲ್ಲ, ಓಡುವ ನಾಲ್ಕೂ ಜನನ ಮೇಲಿರುತ್ತೆ'' ಅಂದರು.

......ಒಪ್ಪಲೇಬೇಕಾದ ಮಾತು ಎಂದು ಮಿಕ್ಕ ನಾಗರೀಕರು ತಲೆ ಆಡಿಸಿದರು.

ಕೆಲವು ಚರ್ಚೆಗಳಲ್ಲಿ, ಅದರಲ್ಲೂ ಸ್ವಲ್ಪ ಹಿರಿಯರಲ್ಲಿ ಯಾವ ವಿಷಯ ಬಂದರೂ ಅದು ಕಡೆಗೆ 'ಸಂಸಾರ'ಕ್ಕೆ ತಿರುಗುತ್ತದೆ. ರಿಲೇ ಆಟವನ್ನು ರೀಲೇ ಆಟವೆಂದು ಕರೆಯುವುದು ಹೆಚ್ಚು ಸರಿ ಎಂದು ಒಬ್ಬರ ಖಚಿತ ಅಭಿಪ್ರಾಯ. ಸಂಸಾರವೇ ಒಂದು ಆಟ. ಗಂಡನನ್ನು 'ರೀ' ಎಂದು ಕರೆಯುವ ಹೆಂಡತಿ, ಹೆಂಡತಿಯನ್ನು 'ಲೇ' ಎಂದು ಕರೆಯುವ ಗಂಡ, ಅವರಿಬ್ಬರು ಸೇರಿ ಆಡುವ ಆಟ ರೀಲೇ ಆಟ ತಾನೇ ಎಂದು ಒಬ್ಬರ ವಾದ. ಸಮರ್ಥರು ಸಾರಥ್ಯ ಹೊರುತ್ತಾರೆ ಆದರೆ ಸಹಕಾರವೇ ಸರ್ವಸ್ವ ಎಂದು ವೇದಾಂತದ ಮಾತು ಬಂತು.

ಹಿರಿಯರ ಮಾತು ಮೆಲಕು ಹಾಕುತ್ತಿರುವಾಗಲೇ ರಿಲೇ ಆಟದಿಂದ ನಾವು ಕಲಿಯುವ/ ಕಲಿಯಬೇಕಾದ ಪಾಠದ ಬಗ್ಗೆ ನನ್ನ ಗೆಳೆಯ ತನ್ನದೆರಡು ಮಾತನ್ನು ಸೇರಿಸಿದ. ನಮ್ಮ ಕೈಯಲ್ಲಿರುವ ಈಗಿನ ಅಧಿಕಾರ, ಆಸ್ತಿ, ನಾವು ಹಿಂದಿನ ಓಟಗಾರನಿಂದ ಪಡೆದದ್ದು, ನಾವು ಅದನ್ನು ಮುಂದಿನವರಿಗೆ ಕೊಡಬೇಕಾದ್ದು. ನಮ್ಮ ಗುರಿ ಏನಿದ್ದರೂ ಹಸ್ತಾಂತರ ಮಾಡುವುದು. ಹಿಂದಿನವನು ತಾನಗೇ ಓಡಿ ಬಂದು ಕೊಡುತ್ತಾನೆ. ನಾನೇ ಕಿತ್ತು ಕೊಳ್ಳಬಾರದು. ಗುರಿ ತಲುಪಿದ ಮೇಲೆ ಓಟ ನಿಲ್ಲಿಸಬೇಕು.

......ಇದ್ಯಾಕೊ ರಾಜಕೀಯದ ಆಡಳಿತ ಪಕ್ಷ ತಮ್ಮ ಶಾಸಕರಿಗೆ ನೀತಿ ಪಾಠ ಹೇಳುವಂತಿತ್ತು. ಅದೂ ಸರಿಯೆನ್ನಿ, ಯಾವುದೇ ಪಕ್ಷ ಈಗ ತನ್ನ ಐದು ವರ್ಷ ಪೂರ್ಣಾವಧಿ ಮುಗಿಸಲು ಕಡೇ ಪಕ್ಷ ನಾಲ್ಕು ಸಿ.ಎಂ.ಗಳನ್ನು ರಿಲೇ ರೇಸ್‌ನಲ್ಲಿ ಓಡಿಸುವ ಅನಿವಾರ್ಯ.

ಆದರೆ ಇಂತಹ ರಿಲೇ ಟೀಮಿನಲ್ಲಿ ಇನ್ನೂ ವಿಚಿತ್ರ ಸಮಸ್ಯೆಗಳು ಉದ್ಭವವಾಗುತ್ತೆ. ತನ್ನ ಮುಂದೆ ಓಡುವವನ ಆಯ್ಕೆ ತಾನೇ ಮಾಡಬೇಕೆಂಬ ಹಠ. ಹಸ್ತಾಂತರ ಮಾಡಲು ಕಾಲಹರಣ ಮಾಡುವುದು. ಆಟದ ಮಧ್ಯೆ ನಿಂತುಬಿಡುವ ಧಮ್ಕಿ!....

....ಮೊಬೈಲ್‌ಗೆ ಫೋನ್ ಬಂತು ''ಎಷ್ಟೊತ್ತಾಯಿತು ಅಡಿಗೆ ಮಾಡಬೇಕೊ ಇಲ್ವೊ? ಜ್ಞಾಪಕವಿದಿಯಾ ನೀವು ಬರುವಾಗ....''

''ಓಹೋ ಜ್ಞಾಪಕವಿಲ್ಲದೆ ಏನು? ಬರುವಾಗ 'ರಿಲೆ'ಯನ್ಸ್‌ನಲ್ಲಿ ತರಕಾರಿ ತೆಗೆದುಕೊಂಡು ಬರಬೇಕು, ಐದು ನಿಮಿಷದಲ್ಲಿ ಓಡಿಕೊಂಡು ಬರುತ್ತೇನೆ'' ಎಂದು ನಾನು 'ರಿಲೇ' – ಆಟದಿಂದ ತಪ್ಪಿಸಿಕೊಂಡು ಮನೆಯ ದಿಕ್ಕಿನ ಕಡೆಗೆ ತಿರುಗಿದೆ. ನಾನೊಬ್ಬ ರೆಸ್‌ಪಾನ್ಸಿಬಲ್ ಹಾಗೂ 'ರಿಲೈ'ಯಬಲ್ ಗಂಡನೆಂದು ಸಾಬೀತು ಮಾಡಬೇಡ್ವೆ?

✵

---

## ಚಿಕಿತ್ಸೆ ಯಾರಿಗೆ

ನಾಗ ಮತ್ತು ಚಂದ್ರ ಮಾತಾಡ್ತಾ ನಿಂತಿದ್ದಾಗ ನಾಗನ ಮೊಬೈಲ್ ಹೊಡ್ಕೊಂಡ್ತು ಹೆಂಡ್ತಿ ಫೋನು. ಅವಳು ತುಂಬಾ ಗಾಬರಿಯಿಂದ ಮಾತಾಡ್ತಿದ್ದುದನ್ನು ಕೇಳಿಸಿಕೊಂಡ ನಾಗನ ಪ್ರತಿಕ್ರಿಯೆ ಹೀಗಿತ್ತು. ''ಏನಂದೇ, ರಾಜುಗೆ ಅಪಘಾತನಾ, ಅವನನ್ನು ಮನೆಯಿಂದ ಹೊರಗಡೆ ಬಿಡಬೇಡ ಅಂತ ಹೇಳಿರ್ಲಿಲ್ವ. ಏನಾಗಿದೆ? ಸ್ಕೂಟರ್ ಬಂದು ಹೊಡೀತಾ, ಕಾಲಿಗೆ ಸ್ವಲ್ಪ ಏಟಾಗಿದ್ಯಾ. ಬೇಗ ಡಾಕ್ಟರ್ ಹತ್ರ ಕರ್ಕೊಂಡು ಹೋಗು. ಅವನಿಗೆ ತಿನ್ನೋಕೆ ಕುಡಿಯೋಕೆ ಅದೂ ಇದೂ ಕೊಡಬೇಡ. ಡಾಕ್ಟರು ಏನು ಹೇಳ್ತಾರೋ ಅದನ್ನೇ ಕೊಡು. ಅವನು ತಿನ್ನಲ್ಲ, ಕುಡಿಯಲ್ಲ ಅಂತ ಹಠ ಮಾಡಿದರೆ ಬಲವಂತವಾಗಿ ತಿನ್ನಿಸು. ನಾ ಬೇಗ ಬರ್ತೀನಿ. ''ಅಂದು ಮೊಬೈಲ್ ಆಫ್ ಮಾಡಿದ. ಚಂದ್ರನೂ ಬೇಜಾರಿಂದ ''ಏನಂತೆ, ರಾಜುಗೆ ಅಪಘಾತವಂತಾ, ರಾಜು ನಿನ್ನ ದೊಡ್ಡ ಮಗನೋಇಲ್ಲಾ ಚಿಕ್ಕ ಮಗನೋ'' ಅಂತ ಕೇಳಿದರೆ ನಾಗ ''ಎರಡೂ ಅಲ್ಲ ರಾಜು ನಮ್ಮನೆ ನಾಯಿ'' ಅಂದು ದಾರೀಲಿ ಹೋಗ್ತಾ ಇದ್ದ ಖಾಲೀ ಆಟೋ ನೋಡಿ ಆಟೋ ಅಂತ ಕೂಗಿ ಅತ್ತ ಓಡಿದಾಗ ಪೆಚ್ಚಾಗಿ ನಿಂತ ಚಂದ್ರ.

– ಸುಕೇಶವ

# ಹಾಲಿವುಡ್ ಮೂವಿ "ವುಡ್ ವರ್ಡ್ಸ್"

**- ಶ್ರೀನಿವಾಸ ಕುಂಡಂತಾಯ**

**"ರೀ....** ಆ ನಿಮ್ಮ ಹಳೇ ರಟ್ಟಿನ ಪೆಟ್ಟಿಗೆಯಲ್ಲಿರುವ ಸಂತೆ, ರಾಶಿನೆಲ್ಲಾ ಹೊರಗೆ ಬಿಸಾಕಿ ಬನ್ನಿ... ಅದೇನೋ ಅಪ್ಪನ ಅಮೂಲ್ಯ ಆಸ್ತಿ ಅಂತ ಇನ್ನೂ ಹಾಗೆ ಇಟ್ಕೊಂಡಿದೀರ" ಎಂದು ನನ್ನವಳು ಕರ್ಕಶ ಸ್ವರದಲ್ಲಿ ಕೂಗಿದಾಗ ವಿಧಿಯಿಲ್ಲದೆ ರಟ್ಟಿನ ಪೆಟ್ಟಿಗೆ ತೆರೆದೆ. ಚಿಕ್ಕವನಿದ್ದಾಗ ಡೈರಿ ಬರೆಯುವ ಅಭ್ಯಾಸ ನನಗಿತ್ತು. ರೌದ್ರಾವತಾರ ತಾಳುತ್ತಿದ್ದ ನಮ್ಮಪ್ಪ ಸಿಟ್ಟಿನ ಜ್ವಾಲಾಮುಖಿ, ನಮ್ಮ ಅಮ್ಮ ಅವರ ಸಿಟ್ಟಿಗೆ ಬಲಿಯಾಗುತ್ತಿದ್ದರು. ನಮ್ಮಪ್ಪನೆದುರು ನಿಂತು ಮಾತನಾಡುವ ಧೈರ್ಯ ನನಗಿರಲಿಲ್ಲ. ಅಮ್ಮನ ಯಾವುದೇ ತಪ್ಪು ಇಲ್ಲದೆಯೂ ಅಪ್ಪ ಬೈಯುತ್ತಿದ್ದದ್ದು ಕೆಲವೊಮ್ಮೆ ಹೊಡೆಯುತ್ತಿದ್ದದ್ದು ನನಗೆ ತುಂಬಾ ಯಾತನೆ ತರುತ್ತಿತ್ತು. ಎದುರಿಸಿ ಮಾತನಾಡುವ ಧೈರ್ಯವಿಲ್ಲದಿದ್ದ ನಾನು "ಅಪ್ಪನ ಬಗ್ಗೆ ಬೆಪ್ಪನ ಡೈರಿ" ಎಂದು ಬರೆದು ಪುಸ್ತಕ ಒಂದರಲ್ಲಿ ನನಗನ್ನಿಸಿದ್ದನ್ನೆಲ್ಲಾ ಬರೆಯುತ್ತಾ ಬಂದೆ, ನನ್ನಪ್ಪ ಸತ್ತಾಗ ನಮ್ಮ ಅಮ್ಮ "ಅದೇನೋ ಅಪ್ಪನ ಬಗ್ಗೆ ಸಿಟ್ಟು ಬಂದಾಗ ಏನೇನೋ ಬರೆದು ಇಟ್ಟಿದ್ದೀಯಲ್ಲ... ಆ ಪುಸ್ತಕಾನ ಬೆಂಕಿಗೆ ಹಾಕು. ಅವರೇ ಹೋಗ್ಬಿಟ್ಟರು, ಇನ್ನು ಅವರ ಬಗ್ಗೆ ನೀನು ಬರೆದದ್ದು ಯಾಕೆ ಇರ್ಬೇಕು" ಅಂದರು. ಅಮ್ಮ ಹೇಳಿದಂತೆಯೇ ಮಾಡಿದೆ. "ಅಪ್ಪನ ಬಗ್ಗೆ ಬೆಪ್ಪ ಬರೆದ ಡೈರಿ" ಇಲ್ಲವಾದರೂ ಡೈರಿ ಬರೆಯುವ ಈ ಬೆಪ್ಪನ ಹವ್ಯಾಸ ಮುಂದುವರೆದಿತ್ತು.

50 ವರ್ಷಗಳ ಹಿಂದೆ ಬರೆದಿಟ್ಟಿದ್ದ ಡೈರಿಯಲ್ಲಿನ ಒಂದು ಕಥೆ ಮತ್ತೆ ಓದೋಣ ಅನ್ನಿಸಿತು, ರಟ್ಟಿನ ಪೆಟ್ಟಿಗೆಯಿಂದ ಹೊರತೆಗೆದ ಡೈರಿಯಲ್ಲಿದ್ದ ಕಥೆ ಓದಲು ಆರಂಭಿಸಿದೆ. ನನ್ನ ಜೊತೆ ನೀವೂ ಓದಿ, ನನ್ನ ಅಭ್ಯಂತರ ಇಲ್ಲ, ರಟ್ಟಿನ ಪೆಟ್ಟಿಗೆಯಲ್ಲಿ ಶೇಖರಿಸಿಟ್ಟಿದ್ದ ಡೈರಿಯಲ್ಲಿ ಸ್ವಾರಸ್ಯಕರವಾದ ಗುಟ್ಟುಗಳೇನೂ ಇಲ್ಲ, ಎಲ್ಲವೂ ತೆರೆದಿಟ್ಟ ಡೈರಿ, ಸಂಕೋಚ ಬೇಡ, ಪರವಾಗಿಲ್ಲ ಓದಿ.

ನಮ್ಮೂರಿನ ಸರ್ದಾರ್ ಟಾಕೀಸ್‌ನಲ್ಲಿ ಪ್ರದರ್ಶನಗೊಳ್ಳುತ್ತಿದ್ದ ಚಲನ ಚಿತ್ರಗಳು ಬಹುಪಾಲು ಹಿಂದಿ, ತಮಿಳು, ತೆಲುಗು, ವರ್ಷಕ್ಕೊಮ್ಮೆಯೋ, ಎರಡು ಸಲವೋ ಕನ್ನಡ ಚಿತ್ರಗಳು ಪ್ರದರ್ಶನಗೊಂಡಿದ್ದೂ ಉಂಟು. ಕನ್ನಡಾಭಿಮಾನ ಕನ್ನಡ ಜನರಲ್ಲಿ ಮೂಡಿಸಲು ಅನೇಕ ಚಳುವಳಿಗಳು ನಡೆದ ಮೇಲೆ ಕನ್ನಡ ಚಿತ್ರಗಳು ಹೆಚ್ಚು ಹೆಚ್ಚು ಪ್ರದರ್ಶನಗೊಳ್ಳಲಾರಂಭಿಸಿದವು.

ನಮ್ಮೂರಿನ ಎರಡು ಪಂಗಡಗಳಿಗೆ ಆಗಾಗ್ಗೆ ಸಣ್ಣ ಪುಟ್ಟ ಕಾರಣಗಳಿಗಾಗಿ ದೊಡ್ಡ ದೊಡ್ಡ ಫೈಟಿಂಗ್ ನಡೆಯುತ್ತಿದ್ದವು. ಈ ಕಾರಣದಿಂದಲೋ ಏನೋ ನಮ್ಮೂರಿನ ಸಿನಿಮಾ ರಸಿಕರಿಗೆ ಫೈಟಿಂಗ್ ಇರುವ ಚಿತ್ರಗಳೆಂದರೆ ಬಹಳ ಇಷ್ಟ

ನಮ್ಮೂರಿನ ಚಲನಚಿತ್ರ ವೀಕ್ಷಕರ ನಾಡಿಮಿಡಿತ ಕಂಡುಕೊಂಡಿದ್ದ ಸರ್ದಾರ್ ಟಾಕೀಸಿನವರು ಯಾವುದೇ ಹೊಸ ಸಿನಿಮ, ಹಳೆ ಸಿನಿಮ ಬಂದರೂ 'ಒಳ್ಳೆಯ ಫೈಟಿಂಗ್‌ನಿಂದ ಕೂಡಿದ ಚಲನಚಿತ್ರ' ಎಂದೇ ಡಂಗುರ ಸಾರಿಸುತ್ತಿದ್ದರು. ಒಂದು ಸುಂದರ ಸಾಂಸಾರಿಕ ಚಿತ್ರದಲ್ಲಿ ಯಾವುದೇ ಫೈಟಿಂಗ್ ಇರಲಿಲ್ಲ. ಒಂದು ದೃಶ್ಯದಲ್ಲಿ ಯಾವುದೋ ಸಿಟ್ಟಿನಿಂದ ಗಂಡ ಹೆಂಡತಿಯ ಕೆನ್ನೆಗೆ ಒಂದೇ ಒಂದು ಏಟು ಕೊಡುತ್ತಾನೆ. ಆ ಸಿನಿಮಾದ ಪ್ರಚಾರದಲ್ಲಿ ಸಹ ''ಒಳ್ಳೆಯ ಫೈಟಿಂಗ್‌ಗಳಿಂದ ತುಂಬಿದ ಚಿತ್ರ'' ಎಂದು ಪ್ರಚಾರ ಮಾಡಿದ್ದು ಇದೆ.

ಒಮ್ಮೊಮ್ಮೆ ಈ ಸರ್ದಾರ್ ಟಾಕೀಸಿನಲ್ಲಿ ಒಂದೇ ಟಿಕೆಟ್‌ನಲ್ಲಿ ಆರು ಚಲನಚಿತ್ರ ಅಂತ ಸಹ ಪ್ರಚಾರ ಮಾಡಿ ''ಯಾವುದೋ ಬೇರೆ ಬೇರೆ ಆರು ಚಲನಚಿತ್ರಗಳಿಂದ ಆಯ್ದ ಕೆಲವೇ ದೃಶ್ಯಗಳಿರುವ ಸಿನಿಮಾ ಪ್ರದರ್ಶನ ಆಗುತ್ತಿತ್ತು. ನಾನು ಮತ್ತು ನನ್ನ ಕ್ಲಾಸ್‌ಮೇಟ್ ಬೋರಯ್ಯ, ''ಒಂದು ಟಿಕೆಟ್‌ನಲ್ಲಿ ಆರು ಸಿನಿಮಾ ನೋಡಬಹುದೆಂಬ'' ಆಸೆಯಿಂದ ಒಟ್ಟಿಗೆ ಹೋಗಿದ್ದೆವು. ಆಗಲೇ ಸಿನಿಮಾ ಪ್ರಾರಂಭವಾಗಿತ್ತು. ಒಳಕ್ಕೆ ಹೋಗಿ ಕುಳಿತುಕೊಳ್ಳಲು ಸೀಟು ಹುಡುಕುವಷ್ಟರಲ್ಲಿ ಎರಡು ಸಿನಿಮಾ ಮುಗಿದು ಇಂಟರ್‌ವಲ್ ಬಂದಾಗಿತ್ತು. ಮುಂದೆ ಇಂಟರ್‌ವೆಲ್ ನಂತರ ನೋಡಿದ ಚಿತ್ರಗಳಲ್ಲಿ ರಾಮಾಯಣದ ದೃಶ್ಯಗಳು ಬಂತು. ಕೂಡಲೇ ಡುಷುಂ, ಡುಷುಂ ಅಂತ ಪಿಸ್ತೂಲಿನಿಂದ ಗುಂಡು ಹಾರಿಸುವ ಯಾವುದೋ ಹಾಲಿವುಡ್ ಮೂವಿ ಬಂತು. ಅದರ ಕಥೆ ಏನೆಂದು ಯೋಚಿಸುವಷ್ಟರಲ್ಲಿ ಎನ್.ಟಿ. ರಾಮ್‌ರಾವ್ ದುರ್ಯೋಧನ ಮತ್ತು ಕೃಷ್ಣನಾಗಿ ಅಭಿನಯಿಸಿದ ದ್ವಿಪಾತ್ರದ ಸಿನಿಮಾ ಒಂದರ ದೃಶ್ಯ ಕೊನೆಗೆ ''THE END'' ಅನ್ನೋದನ್ನು ಮಾತ್ರ ಅರ್ಧಗಂಟೆ ಪ್ರದರ್ಶಿಸಿದ್ದರು.

ಯಾವುದೇ ಚಲನಚಿತ್ರ ನೋಡಲು ನಾನು ಬೋರಯ್ಯ ಒಟ್ಟಿಗೆ ಹೋಗುತ್ತಿದ್ದೆವು. 'ವೀರ ಪಾಂಡಿಯ ಕಟ್ಟ ಬೊಮ್ಮನ್', 'ಮಣಾಳನೇ ಮಂಗೈಯಿನ್ ಭಾಗ್ಯಂ', 'ಸಹಸ್ರಶಿರಚ್ಛೇದ ಅಪೂರ್ವ ಚಿಂತಾಮಣಿ', 'ಪಾತಾಳ ಉಲಗಂ', 'ಪೆಳ್ಳಿಚೇಸಿಚೂಡು', 'ನಾಡೋಡಿಮನ್ನನ್', 'ಮದುರೈವೀರನ್', 'ಸಂಪೂರ್ಣರಾಮಾಯಣಂ', 'ಮುಗಲ್-ಎ-ಅಜಾಂ', 'ಅನಾರ್ಕಲಿ', 'ಗೀತ್‌ಗಾಯಾ ಪತ್ಥರೋಂನೆ', 'ಝುನಕ್ ಝುನಕ್ ಪಾಯಲ್‌ಭಾಜೆ', 'ಸದಾರಮೆ', 'ಮೊದಲತೇದಿ', 'ಬೇಡರಕಣ್ಣಪ್ಪ' ಸಿನಿಮಾಗಳನ್ನು ಒಟ್ಟಿಗೆ ನೋಡಿ ಬೆಳೆಯುತ್ತಾ ಬಂದವರು ನಾವು.

ಬೋರಯ್ಯ ಎಸ್.ಎಸ್.ಎಲ್.ಸಿ. ಪಾಸಾಗಿ ಮೈಸೂರಿಗೆ ಹೋಗಿ ಕಾಲೇಜಿಗೆ ಸೇರಿಕೊಂಡ, ಕಾಲೇಜ್‌ಗೆ ಹೋದದ್ದಕ್ಕಿಂತ ಹಾಲಿವುಡ್ ಮೂವಿಗಳು ಪ್ರದರ್ಶನಗೊಳ್ಳುವ ಸಿನಿಮಾ ಟಾಕೀಸ್‌ಗಳಿಗೇ ಬೋರಯ್ಯ ಹೋದದ್ದು ಹೆಚ್ಚು, ನಾನು ಎಸ್.ಎಸ್.ಎಲ್.ಸಿ. ಫೇಲಾದೆ. ನಂತರ ವಿದ್ಯಾಭ್ಯಾಸಕ್ಕೆ ಟಾಟಾ ಹೇಳಿ ನಮ್ಮೂರಿನಲ್ಲಿದ್ದ ಪುಟ್ಟ ''ಬಾಟಾ ಚಪ್ಪಲಿ ಮಾರುವ ಅಂಗಡಿ''ಯಲ್ಲಿ ಕಾಟಾಚಾರಕ್ಕೆ ಕೆಲಸಕ್ಕೆ ಸೇರಿಕೊಂಡೆ. ರಜೆಯಲ್ಲಿ ಊರಿಗೆ ಬಂದಾಗಲೆಲ್ಲಾ ಬೋರಯ್ಯ ತಪ್ಪದೆ ನನ್ನನ್ನು ಭೇಟಿ ಮಾಡುತ್ತಿದ್ದ. ವಿದ್ಯಾಭ್ಯಾಸದ ಬಗ್ಗೆ ಒಂದಕ್ಷರ ಮಾತನ್ನಾಡದಿದ್ದರೂ ಹಾಲಿವುಡ್ ಮೂವಿಗಳ ಬಗ್ಗೆ ತುಂಬ ಮಾತನಾಡುತ್ತಿದ್ದ.

ನಾನು ಒಂದೂ ಇಂಗ್ಲೀಷ್ ಮೂವಿ ನೋಡಿಲ್ಲ ಎಂಬುದು ಬೋರಯ್ಯನಿಗೆ ಗೊತ್ತು. ತಾನು ಸಿಟಿಯಲ್ಲಿ ಕಾಲೇಜಿಗೆ ಹೋಗುತ್ತಿರುವೆನೆಂಬ ಜಂಬ, ನಾನು ನೋಡದ ಹಾಲಿವುಡ್ ಮೂವೀಸ್ ಎಲ್ಲಾ ನೋಡಿದ್ದೇನೆಂಬ ಗತ್ತು ಬೋರಯ್ಯನಿಗೆ ಇತ್ತು.

''ಗನ್ಸ್ ಆಫ್ ನವರೋನ್'' ನೋಡಿದ್ದೀಯಾ? ''ಜೇಮ್ಸ್ ಬಾಂಡ್ 007'', 'ಮೆಕ್ಕನ್ನಾಸ್ ಗೋಲ್ಡ್'', ''ದಿ ಟೆನ್ ಕಮಾಂಡ್‌ಮೆಂಟ್ಸ್'', ''ಎಂಟರ್‌ದ ಡ್ರಾಗನ್'' ಎಲ್ಲಾ ಹೇಗಿದೆ ಗೊತ್ತೇನೋ ಪೆಕ್ರು? ಮರ್ಲಿನ್ ಬ್ರಾಂಡೋ, ಮರ್ಲಿನ್ ಮನ್ರೋ, ಆಲ್ಪಚಿನೋ, ಗ್ರೇಗರಿಪೆಕ್ ಗೊತ್ತೇನೋ ನಿಂಗೆ ಮಂಕೆ? ಎಂದೆಲ್ಲಾ ಕೇಳಿ ನನ್ನನ್ನು ಕೆಣಕುತ್ತಿದ್ದ. ತಾನು ನೋಡಿದ ಸಿನಿಮಾಗಳನ್ನು ಕಣ್ಣಿಗೆ ಕಟ್ಟುವಂತೆ ವಿವರಿಸಿ ಹೇಳುತ್ತಿದ್ದ. ನಾನು ಕಣ್ಣು-ಕಿವಿ ತೆರೆದು ನಿಬ್ಬೆರಗಾಗಿ ಕೇಳುತ್ತಿದ್ದೆ.

ನನ್ನ ಅಕ್ಕ ಮಗುವಿನ ಹೊಟ್ಟೆ ತೊಂದರೆ ನಿವಾರಣೆಗೆಂದು ನನ್ನ ಅಜ್ಜಿ ಒಂದು ಚೀಟಿಯಲ್ಲಿ ''ವುಡ್‌ವರ್ಡ್ಸ್ ಗ್ರೈಪ್ ವಾಟರ್'' ಎಂದು ಬರೆದುಕೊಟ್ಟು ''ಇದನ್ನು ತಕೊಂಬಾ'' ಅಂತ ಹೇಳಿದರು. ಚಪ್ಪಲಿ ಅಂಗಡಿಗೆ ಹೋಗಿ ಕಾಸು ಪಡೆದು ಗ್ರೈಪ್ ವಾಟರ್ ತರೋಣ ಅಂತ ಅಂಗಡಿಗೆ ಬಂದೆ. ಬೋರಯ್ಯ ನನಗಾಗಿ ಕಾದು ಕುಳಿತಿದ್ದ.

''ಈ ಸಲ ''ಬ್ಲೂ ಲಗೂನ್'' ನೋಡ್ದೇ ಕಣೋ'' ''ಒಂಚೂರೂ ಮುಚ್ಚು ಮರೆಯಿಲ್ಲ ಎಲ್ಲಾ ಖುಲ್ಲಂ ಖುಲ್ಲಂ ತೋರಿಸ್ತಾರೆ ಕಣೋ'' ''ನಾನು ಹತ್ತು ಸಲ ನೋಡಿದೆ ಕಣೋ'' ಎಂದ ''ಗೂಶ್ಲು.... ಈ ಜನ್ಮದಲ್ಲಿ ಒಂದಾದ್ರೂ ಹಾಲಿವುಡ್ ಮೂವಿ ನೋಡಿದ್ದೀಯೇನೋ? ಅದೇ ಎಂ.ಜಿ.ಆರ್. ಶಿವಾಜಿ, ಜೆಮಿನಿ, ಎನ್.ಟಿ.ಆರ್. ಸಿನಿಮಗಳನ್ನೇ ನೋಡ್ಕೊಂಡು ಬಿದ್ದಿರು ಎಂದು ಅಪಹಾಸ್ಯ ಮಾಡಿನಕ್ಕ.

ಈ ಸಲ ಇವನಿಗೆ ಹೇಗಾದ್ರೂ ಮಾಡಿ ಬುದ್ಧಿ ಕಲಿಸಬೇಕು ಅನ್ನಿಸ್ತು. ಕೈಲಿ ಅಜ್ಜಿ ಬರ್ಕೊಟ್ಟಿದ್ದ ಚೀಟಿಯನ್ನು ಒಮ್ಮೆ ನೋಡಿದೆ. ''ಅದ್ಸರಿ....ಬೋರಯ್ಯ. ನೀನು ''ವುಡ್‌ವರ್ಡ್ಸ್ ಗ್ರೈಪ್ ವಾಟರ್'' ನೋಡಿದ್ದೀಯಾ, ನಾನು ನೋಡಿದ್ದೇನೆ ಅಂದೆ.

ಬೋರಯ್ಯ ದಂಗಾಗಿ ಹೋದ, ಇದ್ಯಾವುದಪ್ಪಾ ನಾನು ನೋಡದೇ ಬಿಟ್ಟ ಹಾಲಿವುಡ್ ಮೂವಿ ಎಂದು ಚಿಂತಾಕ್ರಾಂತನಾದ, ಸಾವರಿಸಿಕೊಂಡು ಕೇಳಿದ ''ಯಾರು ಅದರಲ್ಲಿ ಹೀರೋ, ಹೀರೋಯಿನ್, ಎಲ್ಲಿ ನೋಡಿದೆ? ನಂಗೆ ಯಾಕೆ ಗೊತ್ತಾಗ್ಲಿಲ್ಲ? ಎಂದೆಲ್ಲಾ ಪ್ರಶ್ನೆಗಳ ಸುರಿಮಳೆಗರೆದ.

ಈಗ ನಗುವ ಸರದಿ ನನ್ನದಾಗಿತ್ತು.

''ಮಗು ಅಳ್ತಿದೆ ಯಾಕೆ? ಅಂದ್ರೆ ಸಾಕು, ಮಗುಗೆ ''ವುಡ್‌ವರ್ಡ್ಸ್ ಗ್ರೈಪ್ ವಾಟರ್ ಕೊಡು'' ಅಂತ ಎಲ್ಲಾ ಅಜ್ಜಿಯರೂ ಅವರವರ ಮಕ್ಕಳು, ಮೊಮ್ಮಕ್ಕಳಿಗೆ ಹೇಳುವ ಪಾಪ್ಯುಲರ್ ಔಷಧಿ ಅದೂ ನಿಂಗೊತ್ತಿಲ್ವಾ? ಅಲ್ಲ ಕಣೋ ''ವುಡ್‌ವರ್ಡ್ಸ್ ಗ್ರೈಪ್ ವಾಟರ್'' ಅಂದ್ರೆ ಹಾಲಿವುಡ್ ಮೂವಿ ಅಂತ ಯಾರು ಹೇಳಿದ್ರು? ಅದು ಪುಟ್ಟ ಮಕ್ಕಳಿಗೆ ಹೊಟ್ಟೆ ತೊಂದರೆ ಆದಾಗ ಎಲ್ಲಾ ಅಮ್ಮಂದ್ರೂ ಕೊಡೋ ಔಷಧಿ. ಅದೂ ನಿಂಗೆ ಗೊತ್ತಿಲ್ವೇನೋ''

ಅಂದೆ. ಬೋರಯ್ಯ ತಲೆತಗ್ಗಿಸಿದ. ಅಪಮಾನವಾಯಿತೋ ಏನೋ, ಸೀದಾ ಮನೆಗೆ ಹೋದ, ಅಂದೇ ಕೊನೆ ಮುಂದೆಂದೂ ಹಾಲಿವುಡ್ ಸಿನಿಮಾಗಳ ಬಗ್ಗೆ ಬೋರಯ್ಯ ನನ್ನಲ್ಲಿ ಮಾತನಾಡುವುದನ್ನೇ ಬಿಟ್ಟ. ಇತ್ತೀಚೆಗೆ ಬೋರಯ್ಯನಲ್ಲಿ ನಾನು ಕಂಡ ಬದಲಾವಣೆ ಅಂದರೆ, ಅವನು ಊರಿಗೆ ಬಂದಾಗ ಸರ್ದಾರ್ ಟಾಕೀಸಿನಲ್ಲಿ ಯಾವುದೇ ಕನ್ನಡ ಸಿನಿಮಾ ಪ್ರದರ್ಶನಗೊಳ್ಳುತ್ತಿದ್ದರೂ ನನ್ನನ್ನು ಕರ್ಕೊಂಡು ಹೋಗ್ತಾನೆ. ಇದಿಷ್ಟೇ ಕಥೆ ಡೈರಿಯಲ್ಲಿ ಓದಲು ದೊರಕಿದ್ದು. ಮುಂದಿನ ಪುಟಗಳನ್ನೆಲ್ಲಾ ಗೆದ್ದಲು ಹುಳು ತಿಂದು ಹಾಕಿತ್ತು. ಅನೇಕ ಡೈರಿಗಳನ್ನು ಸಹಧ್ವಂಸ ಮಾಡಿತ್ತು. ನಾನು ನೀವು ಇಬ್ಬರೂ ಓದಿಯಾದ ಮೇಲೆ ಈ ಡೈರಿ, ದೂಳಿಂದ ತುಂಬಿದ ರಟ್ಟಿನ ಪೆಟ್ಟಿಗೆ ಸಂರಕ್ಷಿಸುವುದೇಕೆ ಎಂದು ಕಸದ ತೊಟ್ಟಿಯಲ್ಲಿ ಹಾಕಲು ಇದೀಗ ಹೊರಟಿದ್ದೇನೆ. ಹೊರ ಹೋಗುತ್ತಿದ್ದಂತೆ ''ಸಧ್ಯ... ಕೊನೆಗೂ ಮನೆಯಿಂದ ತೊಲಗಿತಲ್ಲಾಂತ'' ಶ್ರೀಮತಿ ಹೇಳಿದ್ದು ಕೇಳಿಸಿತು. ರಟ್ಟಿನ ಪೆಟ್ಟಿಗೆ ಕುರಿತೇ ಹೇಳುತ್ತಿರಬಹುದೆಂದುಕೊಂಡೆ.

✵

---

## ಯಾರು ಸುಳ್ಳರು

ಕಳ್ಳನೊಬ್ಬನನ್ನ ನ್ಯಾಯಾಧೀಶರ ಮುಂದೆ ಹಾಜರು ಪಡಿಸಿದ್ದರು. ವಿಚಾರಣೆ ಎಲ್ಲ ಮುಗಿದ ಮೇಲೆ ಅವನಿಗೆ ಒಂದು ವರ್ಷ ಜೈಲು ಶಿಕ್ಷೆ ಆಗಲಿದೆ ಅಂತ ಆಯ್ತು. ''ಈಗ ನೀನು ಹೇಳುವುದು ಏನಾದರೂ ಇದೆಯೇ'' ಅಂತ ನ್ಯಾಯಾಧೀಶರು ಕೇಳಿದಾಗ ಕಳ್ಳ ಅಳುತ್ತಾ ''ಮನೇಲಿ ಇರೋದು ನನ್ನ ಹೆಂಡ್ತಿ, ಒಂದು ಸಣ್ಣ ಮಗು. ನಾನಿಲ್ದೇ ಇದ್ರೆ ಅವಳಿಗೆ ತಾಪತ್ರಯ. ಬೇರೆ ಯಾರೂ ಸಂಪಾದನೆ ಮಾಡೋರಿಲ್ಲ. ಅವರು ಉಪವಾಸ ಸಾಯ ಬೇಕಾಗುತ್ತೆ. ನನ್ನನ್ನ ಬಿಟ್ಬಿಡಿ ಇನ್ನೊಂದ್ಸಾರಿ ಕಳ್ಳತನ ಮಾಡಲ್ಲ'' ಅಂತ ಬೇಡಿದ. ಅದಕ್ಕೆ ನ್ಯಾಯಾಧೀಶರು ''ನೀನು ನಿನ್ನ ಹೆಂಡ್ತಿನ ಸಿಕ್ಕಾಪಟ್ಟೆ ಹೊಡೀತೀಯಂತೆ, ಗೋಳು ಹುಯ್ಕೊಳ್ತೀ ಯಂತೆ ಅದಕ್ಕೆ ನಿನ್ನ ಹೆಂಡ್ತಿ ಇವತ್ತು ಬೆಳಗ್ಗೆ ನನ್ನ ಹತ್ರ ಬಂದು ನಿನಗೆ ಒಂದು ವರ್ಷ ಜೈಲು ಶಿಕ್ಷೆ ಕೊಡಿ ಅಂತ ಹೇಳಿದಾಳೆ'' ಅಂದರು. ಅದಕ್ಕೆ ಕಳ್ಳ ಸಿಕ್ಕಾಪಟ್ಟೆ ನಕ್ಕ. ''ಯಾಕಯ್ಯ ನಗ್ತೀಯ'' ಅಂದ್ರೆ, ''ನಾನು ಸುಳ್ಳು ಹೇಳ್ತನಿ ಅಂದ್ರೆ ನೀವು ನಮ್ಮಪ್ಪನಂಗೆ ಸುಳ್ಳು ಹೇಳ್ತೀರ'' ಅಂದ. ''ನಾನೆಲ್ಲಯ್ಯ ಸುಳ್ಳು ಹೇಳ್ದೆ'' ಅಂತ ನ್ಯಾಯಾಧೀಶರು ಕೇಳಿದರೆ ಕಳ್ಳ ಹೇಳಿದ ''ನನಗೆ ಮದುವೆನೇ ಆಗಿಲ್ಲ'' ಅಂತ.

– ಸುಕೇಶವ

# ಮುಸ್ಸಂಜೆಯ ಸಮಯ.......

- ಎಚ್. ಗೋಪಾಲಕೃಷ್ಣ

**ನ**ನಗೆ ನೀಡಿದ್ದ ಅಡ್ರೆಸ್‌ನ ಚೀಟಿ ತೆಗೆದೆ, ಸರಿಯಾದ ವಿಳಾಸಕ್ಕೆ ಬಂದಿದ್ದೇನೆ ಎಂದು ಖಚಿತ ಪಡಿಸಿಕೊಂಡು ಮನೆ ಬಾಗಿಲ ಕರೆಗಂಟೆ ಒತ್ತಿದೆ. ಮನೆಯ ಒಳಗೆ ಅದೇನೇನೋ ಸರಿಸಿದ ಹಾಗೆ ಜರುಗಿಸಿದಂತೆ ಕೇಳಿಸಿತು. ಇರಿ ಬಂದೇ ಅನ್ನುವ ಕ್ಷೀಣ ದನಿಯ ಕೂಗೂ ಕೇಳಿಸಿತು. ಕೊಂಚ ಸಮಯದ ನಂತರ ಬಾಗಿಲು ತೆರೆಯಿತು. ಸುಮಾರು ನನ್ನ ತಾತನ ವಯಸ್ಸಿನ ವೃದ್ಧರೊಬ್ಬರು ಬಾಗಿಲಿಗೆ ಅಡ್ಡ ನಿಂತಿದ್ದರು.

''ನೀವೇನೋ ಟ್ಯಾಕ್ಸಿಯವರು?'' ಎಂದು ಕೇಳಿದರು.

''ಹೌದು ಸಾರ್...''

ಮುಂಬಾಗಿಲು ಪೂರ್ತಿ ತೆರೆದು ಒಳಗಡೆ ಕೂಗಿದರು. ಬಾಗಿಲುಗಳು ಹಾಕಿದ್ದ ರೂಮುಗಳು, ಜೋಡಿಸಿಟ್ಟ ಸಣ್ಣ ಪುಟ್ಟ ಸಾಮಾನುಗಳು, ಪ್ಲಾಸ್ಟಿಕ್ ಹಾಳೆ ಹೊದಿಸಿದ್ದ ಹಲವಾರು ವಸ್ತುಗಳು ಹಾಲಿನ ತುಂಬಾ ಹರಡಿದ್ದವು. ಗೋಡೆಯ ಮೇಲಿನ ಫೋಟೋಗಳನ್ನು ತೆಗೆದು ಒಂದು ರಟ್ಟಿನ ಡಬ್ಬದಲ್ಲಿ ಹಾಕಿದ್ದರು. ಅದು ಡಬ್ಬದ ಒಳಗಿನಿಂದ ಇಣುಕುತ್ತಿತ್ತು. ತಾತನ ಪಕ್ಕದಲ್ಲಿ ಒಂದು ಪುಟ್ಟ ಸೂಟ್‌ಕೇಸು. ನಾಲ್ಕು ದಿವಸಕ್ಕೆ ಸರಿಹೋಗುವಷ್ಟು ಬಟ್ಟೆ ಹಿಡಿಸುವಂತಹುದು ಇತ್ತು. ತಾತ ಷರಟು ಒಳಗೆ ತೂರಿಸಿ ಪ್ಯಾಂಟು ಧರಿಸಿ ಕೊರಳಿಗೆ ಮಫ್ಲರು ಸುತ್ತಿದ್ದರು. ಅದರ ಮೇಲೆ ಒಂದು ಓಪನ್ ಕಾಲರಿನದೊಂದು ಕಾಲದಲ್ಲಿ ಕಂದು ಬಣ್ಣದ್ದಾಗಿದ್ದ ಕೋಟು ತೊಟ್ಟಿದ್ದರು. ದಿಲೀಪ್ ಕುಮಾರ್, ದೇವಾನಂದ್ ಕಾಲದ ಹಳೇ ಸಿನಿಮಾದ ಪಾತ್ರವೊಂದು ನಿಮ್ಮ ಕಣ್ಣೆದುರು ಬಂದರೆ ಹೇಗೆ ಕಾಣಬಹುದೋ ಹಾಗೇ ಕಾಣುತ್ತಿದ್ದರು. ನಾನು ನಿಂತಿದ್ದ ಹಾಗೆ ಅವರು ಸ್ಟೂಲಿನ ಮೇಲೆ ಕೂತು ಕ್ಯಾನ್‌ವಾಸ್ ಶೂ ಧರಿಸಿದರು.

''ಹೋಗೋಣವಾ? ಸ್ವಲ್ಪ ಇದು ತೊಗೋತೀರಾ?'' ಅಂತ ಸೂಟ್ ಕೇಸು ತೋರಿಸಿದರು. ಅದನ್ನು ಕೈಗೆ ತಗೊಂಡೆ, ಅವರು ಮುಂಬಾಗಿಲು ಬೀಗ ಹಾಕಲು ಸಹಾಯ ಮಾಡಿದೆ. ನಂತರ ಅವರ ಕೈ ಹಿಡಿದುಕೊಂಡು ಲಿಫ್ಟಿನವರೆಗೆ ಬಂದು ಅವರ ಸಂಗಡವೇ ಆರನೇ ಮಹಡಿಯಿಂದ ನೆಲಮಹಡಿಗೆ ಬಂದೆ. ನನ್ನ ನೆರವು ಪಡೆಯುತ್ತಾ ಅವರೂ ಕಾರಿನ ಬಳಿ ಬಂದರು, ಬಾಗಿಲು ತೆರೆದೆ, ಒಳಗೆ ಕೂತರು. ನನ್ನ ಸೀಟಿನಲ್ಲಿ ಕೂತು ಕಾರು ಸ್ಟಾರ್ಟ್ ಮಾಡಿದೆ.

''ಎಲ್ಲಿಗೆ ಅಂತ ಹೇಳಿದ್ದಾರಾ?''

''ಹೂಂ ಸಾರ್...''

‘‘ಹೇ ಸಾರ್ ಗೀರ್ ಅನ್ನಬೇಡಿ ತಾತ ಅನ್ನಿ ಸಾಕು’’ ಅಂದರು.

‘‘ಸರಿ ತಾತಾ... ನನಗೂ ಬಹುವಚನದಲ್ಲಿ ಮಾತಾಡಿಸಬೇಡಿ...’’

‘‘ಹೂಂ, ಸರೀನಪ್ಪಾ ನನ್ನ ಮೊಮ್ಮಗನ ವಯಸ್ಸು ನಿನ್ನದು... ಯಾವ ರಸ್ತೆಯಲ್ಲಿ ಹೋಗ್ತೀ......’’

ರಸ್ತೆಯ ವಿವರ ನೀಡಿದೆ.

‘‘ಹಾಗೆ ಬೇಡಪ್ಪಾ ಸ್ವಲ್ಪ ಸುತ್ತಾದರೂ ಪರವಾಗಿಲ್ಲ, ನಾನು ಹೇಳಿದ ರಸ್ತೆಯಲ್ಲಿ ಹೋಗು...’’

ಮೀಟರು ಹಾಕಿದ್ದೀನಿ, ದೂರದ ರಸ್ತೆಯಾದರೆ ಏನಂತೆ ಕಾಸು ಕೊಡೋದು ಅವರು ತಾನೆ..

‘‘ಆಗಲಿ ತಾತ’’ ಅಂದೆ.

ಹತ್ತಿರದ ದಾರಿ ಬದಲಿಗೆ ತಾತ ದೂರದ ದಾರಿ ಹೇಳಿದರು. ಅವರು ಹೇಳಿದ ಹಾಗೆ ಹೋಗುತ್ತಿದ್ದೆ.

‘‘ನಿಧಾನವಾಗೇ ಹೋಗು. ನನಗೇನೂ ಅರ್ಜೆಂಟು ಇಲ್ಲ. ವೃದ್ಧಾಶ್ರಮಕ್ಕೆ ಕೊನೆಗಾಲ ಕಳೆಯಲು ಹೋಗ್ತಾ ಇದೀನಿ. ಮಕ್ಕಳು ಅಲ್ಲಿ ಹೊರದೇಶದಲ್ಲಿವೆ, ಹೆಂಡತಿ ಈಚೆಗೆ ತೀರಿದಳು. ನನ್ನ ನೋಡಿಕೊಳ್ಳೋದಿಕ್ಕೆ ಇಲ್ಲಿ ಯಾರೂ ಇಲ್ಲ ಅದಕ್ಕೆ ನನ್ನ ಮಕ್ಕಳು ಬಂದಿದ್ದೋರು ಒಂದು ಆಶ್ರಮದಲ್ಲಿ ನನಗೆ ಜಾಗ ಗೊತ್ತು ಮಾಡಿದ್ದಾರೆ....’’

ತಾತ ಅವರ ಕಥೆ ಹೇಳುತ್ತಿದ್ದಂತೆ ಕನ್ನಡಿಯಲ್ಲಿ ಅವರ ಮುಖ ನೋಡಿದೆ, ಅವರ ಕಣ್ಣಂಚಿನಲ್ಲಿ ನೀರು ಒಸರುತ್ತಿದೆ ಅನಿಸಿತು. ಎದುರು ನೋಡುತ್ತಾ ಗಾಡಿ ಚಾಲಿಸಿದೆ.

‘‘ಇಲ್ಲಿ ಸ್ವಲ್ಪ ನಿಲ್ಲಿಸು... ನೋಡು ಈ ಜಾಗದಲ್ಲೇ ನಾನು ಒಂದು ಸೈಕಲ್ ಶಾಪ್ ಇಟ್ಟಿದ್ದೆ... ನಲವತ್ತನೇ ಇಸವಿ ಇಲ್ಲ ಅದಕ್ಕೂ ಮೊದಲು, ಆಗ ತಾನೆ ನನಗೆ ಮದುವೆಯಾಗಿತ್ತು, ಜೀವನ ಶುರು ಮಾಡಿದ್ದೆವು.......’’

ಹತ್ತು ನಿಮಿಷ ಅಂಗಡಿ ಮುಂದೆ ನಿಂತು ನೆನಪಿಸಿಕೊಂಡ ನಂತರ ಹೊರಡು ಅಂದರು. ಹೊರಟೆ.

‘‘ದೊರೆ, ಇಲ್ಲಿ ಸ್ವಲ್ಪ ...’’ ಅಂದರು ನಿಲ್ಲಿಸಿದೆ.

‘‘ಮೊದಲು ಇಲ್ಲಿ ಒಂದು ಸ್ಕೂಲಿತ್ತು, ಚಿಕ್ಕ ಬಿಲ್ಡಿಂಗಿನಲ್ಲಿ ಶುರು ಮಾಡಿದ್ದರು. ನನ್ನ ಮೊದಲನೇ ಮಗನ್ನ ಇಲ್ಲೇ ಸೇರಿಸಿದ್ದೆವು. ಸ್ಕೂಲು ಆಮೇಲೆ ದೊಡ್ಡದಾಯಿತು, ಅವನು ಅಲ್ಲೇ ಎಸ್ಸೆಲ್ಸೀನೂ ಓದಿದ್ದು... ಸರಿ...’’

ಮುಂದೆ ಹೊರಟೆ.. ಮತ್ತೊಂದು ಹದಿನೈದು ನಿಮಿಷ.

‘‘ಅಪ್ಪಾ ನಿಲ್ಲಿಸೋ.. ಇದು ಹೆರಿಗೆ ಆಸ್ಪತ್ರೆ ಅಲ್ವೇನೋ? ಇಲ್ಲೇ ನನ್ನ ಮೊದಲನೇ ಮಗ ಹುಟ್ಟಿದ್ದು... ಎರಡನೆಯವನೂ ಇಲ್ಲೇ ಅಂತ ಕಾಣುತ್ತೆ.. ಅರವತ್ಮೂರು ರೂಪಾಯಾಗಿತ್ತು

ಆಗ ಆಸ್ಪತ್ರೆ ಬಿಲ್ಲು.... ನನ್ನ ಹೆಂಡತಿ ಅದು ಜಾಸ್ತಿ ಅಂತ ಡಾಕ್ಟರ ಹತ್ತಿರ ಜಗಳವಾಡಿದ್ದಳು....''

ಪರವಾಗಿಲ್ಲ ತಾತನ ನೆನಪು ಜೋರಾಗಿದೆ ಅನಿಸಿತು..

ದಾರಿ ಉದ್ದಕ್ಕೂ ಕೊಂಚ ಗಾಡಿ ನಿಲ್ಲಿಸು ಅನ್ನೋದು, ಗಾಡಿ ನಿಲ್ಲಿಸಿದ ನಂತರ ಅಲ್ಲಿಯ ನೆನಪುಗಳನ್ನು ಹೇಳಿಕೊಳ್ಳುವುದು ಹೀಗೆ ಮುಂದುವರೆಯಿತು. ಅವರು ಓದಿದ್ದ ಕಾಲೇಜು, ಅವರ ಮಕ್ಕಳು ಆಟವಾಡಿದ ಜಾಗ, ಅವರ ಹೆಂಡತಿ ಅಧ್ಯಕ್ಷರಾಗಿದ್ದ ಕ್ಲಬ್ಬು.. ಅವರು ಸೈಕಲ್ ಶಾಪಿನಿಂದ ಹೊಸಾ ಜಾಗಕ್ಕೆ ಸ್ಕೂಟರು ಮಾರಾಟಕ್ಕೆ ಆರಿಸಿಕೊಂಡ ಜಾಗ, ಅವರ ಕಾರಿನ ಸೇಲ್ಸು ಅಂಗಡಿ... ಅವರು ಅಧ್ಯಕ್ಷರಾಗಿದ್ದ ಕಾಲೇಜಿನ ಹಳೇ ಬಿಲ್ಡಿಂಗು, ಅವರ ಹೆಂಡತಿ ಶುರು ಮಾಡಿದ್ದ ನರ್ಸರಿ ಸ್ಕೂಲು.. ಅವರ ಮಗ ಮದುವೆಯಾದ ದೊಡ್ಡ ಛತ್ರ..... ಹೀಗೆ ಹಲವಾರು ಸ್ಥಳಗಳ ಪರಿಚಯ ನನಗೆ ಮಾಡಿದರು.... ಎರಡು ಮೂರು ಕಡೆ ನಿಲ್ಲಿಸಿ ಎಳನೀರು ಕುಡಿಸಿದ್ದರು. ಒಂದು ಹೋಟಲ್ಲಿಗೆ ಕರೆದುಕೊಂಡು ಹೋಗಿ ಅವರು ತಿಂಡಿ ತಿಂದು ನನಗೆ ಊಟ ಕೊಡಿಸಿದರು.

ಹಿಂದಿನ ದಿವಸವೇ ನಾನು ಕೆಲಸ ಮಾಡುವ ಟ್ರಾವೆಲಿಂಗ್ ಏಜೆನ್ಸಿಯ ಮಾಲೀಕರು ಕೂಗಿದ್ದರು.

''ನೋಡು ಈ ಅಡ್ರೆಸ್ಸು ಗೊತ್ತಾ?'' ಅಂತ ಚೀಟಿ ತೋರಿಸಿದ್ದರು.

''ಗೊತ್ತಿಲ್ಲದೇ ಏನು ಸಾರ್? ಹಳೇ ತಲೆಮಾರಿನ ಊರಿನ ಪ್ರಖ್ಯಾತರ ಮನೆ ಅದು....'' ಅಂತ ಮನೆಯವರ ಬಗ್ಗೆ ನನಗೆ ಗೊತ್ತಿದ್ದನ್ನು ಅವರಿಗೆ ಹೇಳಿದ್ದೆ.

''ಯಜಮಾನರು ಈಗ ಒಂಟಿಯಾಗಿಬಿಟ್ಟಿದ್ದಾರೆ. ಮಕ್ಕಳು ಫಾರಿನ್‌ನಲ್ಲಿ ಸೆಟಲ್ ಆಗಿಬಿಟ್ಟಿದ್ದಾರೆ. ಮನೆ ಮಾರಾಟ ಕೂಡ ಆಗಿದೆ. ಯಜಮಾನರಿಗೆ ಅಂತ ಒಂದು ಓಲ್ಡೇಜ್ ಹೋಮನ್ನ ಮಕ್ಕಳು ಗೊತ್ತುಮಾಡಿದಾರೆ. ನಾಳೆ ಅವರು ಅಲ್ಲೀಗೆ ಶಿಫ್ಟಾಗ್ತಾರೆ. ಅವರ ಜತೆ ಹೋಗಿ ಅಲ್ಲಿ ಬಿಟ್ಟು ಬಾ. ಹೆಚ್ಚು ಬಾಡಿಗೆ ಗೀಡಿಗೇಗೆ ಡಿಮ್ಯಾಂಡು ಮಾಡಬಾರದು, ಅವರಾಗಿ ಅವರೇ ಏನಾದರೂ ಟಿಪ್ಸು ಅಂತ ಕೊಟ್ಟರೆ ಇಸ್ಕೋ. ನೀನು ಒಳ್ಳೆಯವನು ಅಂತ ಗೊತ್ತು ಅದಕ್ಕೇ ನಿನ್ನನ್ನು ಅವರ ಜತೆಗೆ ಕಳಿಸ್ತಾ ಇರೋದು...'' ಅಂತ ಒಂದೂವರೆ ಗಂಟೆ ಪಾಠ ಹೇಳಿ ಈ ಜವಾಬ್ದಾರಿ ಹೊರಿಸಿದ್ದರು.

ತಾತ ತಲುಪಬೇಕಾದ ವಿಳಾಸಕ್ಕೆ ಸೇರಿದೆವು.

''ತಾತ ನೀವು ಹೇಳಿದ ಅಡ್ರೆಸ್ಸು ಇದೇ....'' ಅಂತ ಬಾಗಿಲು ತೆಗೆದೆ. ಇವರನ್ನೇ ಕಾಯುತ್ತಿದ್ದ ಇಬ್ಬರು ಅಟೆಂಡರುಗಳು ಗಾಲಿಕುರ್ಚಿ ಸಮೇತ ಇವರೆದುರು ಕಾರಿನ ಬಾಗಿಲ ಬಳಿ ಬಂದರು. ತಾತ ಕಾರಿನಿಂದ ಕೆಳಗಿಳಿದರು.

''ತುಂಬಾ ಚೆನ್ನಾಗಿ ಡ್ರೈವ್ ಮಾಡಿದೆಯಪ್ಪಾ.. ಕಾರಿನಲ್ಲಿ ಕೂತಿದ್ದೀನಿ ಅಂತ ಅನಿಸಲೇ ಇಲ್ಲ...'' ಅಂತ ಹೇಳುತ್ತಾ ಭುಜ ತಟ್ಟಿದರು.

''ನೀವು ನಮ್ಮ ತಾತ ಅಂತ ಅನಿಸಿತು.....'' ಅಂದೆ.

ತಾತನನ್ನ ತಬ್ಬಬೇಕು ಅನಿಸಿತು, ಅವರು ಭುಜ ತಟ್ಟುತ್ತಿದ್ದ ಹಾಗೇ ಅವರನ್ನು ತಬ್ಬಿದೆ. ಪರ್ಸು ತೆಗೆದು ಅದರಿಂದ ಕೆಲವು ನೋಟುಗಳನ್ನು ತಾತ ಆಚೆ ತೆಗೆದರು. ತಗೋ... ಅಂತ ನೋಟು ನೀಡಲು ಕೈ ಮುಂದೆ ಚಾಚಿದರು.

''ತಾತ ಬೇಡಿ, ನಿಮ್ಮ ಮೊಮ್ಮಗನ ಹಾಗೆ ನಾನು.....'' ಏಕೋ ಕಣ್ಣು ಮಬ್ಬಾಗುತ್ತಿದೆ ಅನಿಸಿತು. ತಾತ ಬಲವಂತವಾಗಿ ಜೇಬಿಗೆ ನೋಟು ತುರುಕಲು ಬಂದರು.

''ತಾತ ಬೇಡಿ, ಪ್ಲೀಸ್..'' ಅಂದೆ.

''ಅಯ್ಯೋ ನಿನಗೆ ಬಾಡಿಗೆ ಇಲ್ಲ ಅಂದರೆ ಹೇಗೋ..?''

''ನನಗೆ ಬೇರೆ ಗಿರಾಕಿ ಸಿಗ್ತಾರೆ ತಾತಾ....'' ಅಂತ ಹೇಳುತ್ತಾ ಅವರ ಕಾಲಿಗೆ ಬಿದ್ದೆ. ತಾತ ತಲೆ ಸವರಿತು....

ಈ ಮಾತು ನಡೆಯಬೇಕಾದರೆ ತಾತ ಗಾಲಿಕುರ್ಚಿಯಲ್ಲಿ ಕೂತಿದ್ದರು. ನಿಧಾನಕ್ಕೆ ಗಾಲಿ ಕುರ್ಚಿ ಕಾಂಪೌಂಡಿನ ತೆರೆದ ಬಾಗಿಲು ಹೊಕ್ಕಿತು. ಬಾಗಿಲು ಮುಚ್ಚಿಕೊಂಡಿತು. ಮುಳುಗುತ್ತಿದ್ದ ಸೂರ್ಯ, ನಿಧಾನಕ್ಕೆ ಕತ್ತಲಾಗುತ್ತಿದ್ದ ಸಮಯ, ಕತ್ತಲಿನಲ್ಲಿ ತಾತ ಲೀನವಾಗುತ್ತಾರೆ ಎನ್ನುವ ಭಾವ ಮನಸ್ಸನ್ನು ಆವರಿಸಿಬಿಟ್ಟಿತು....

ಮುದುಕರನ್ನು ಕರೆದೊಯ್ಯಲು ನಿರಾಕರಿಸಿದ್ದರೆ ಎಂಥ ಅವಕಾಶದಿಂದ ವಂಚಿತನಾಗುತ್ತಿದ್ದೆ ಅನಿಸಿತು. ಅಥವಾ ನನ್ನ ಬದಲು ಒಬ್ಬ ಸಿಡುಕ, ದುರಾಸೆಯ ಚಾಲಕ ತಾತನಿಗೆ ಸಿಕ್ಕಿದ್ದರೆ....

ನಮ್ಮ ಜೀವನ ದೊಡ್ಡದನ್ನು ಸಾಧಿಸಲು ಇರುವುದು ಎಂದು ನಾವೇ ನಂಬಿಕೊಂಡರೂ ಆ ದೊಡ್ಡದು ತುಂಬಾ ಸಾಮಾನ್ಯ ರೂಪದಲ್ಲಿ ಅತಿ ಚಿಕ್ಕ ಪ್ರಸಂಗವಾಗೇ ಬರುತ್ತದೆಯೇನೋ.. ನಿಮ್ಮ ಸಂಪರ್ಕದವರು ನೀವು ಏನು ದೊಡ್ಡದು ಮಾಡಿದಿರಿ ಅಥವಾ ಏನು ಅಗಾಧವಾದ್ದು ಸಾಧಿಸಿದಿರಿ ಎಂದು ಚಿಂತಿಸುವುದಿಲ್ಲ, ಬದಲಿಗೆ ನೀವು ಅವರ ಮನಸ್ಸನ್ನು ಹೇಗೆ ಆವರಿಸಿಕೊಂಡಿರಿ ಎಂದು ಚಿಂತಿಸುತ್ತಾರೆ. ಜೀವನ ನಾವಂದುಕೊಂಡಷ್ಟು ಸುಖಮಯವಾಗಿರಲಾರದು ಆದರೆ ಅದು ನಮಗೆ ತೃಪ್ತಿ, ಖುಷಿ, ನೆಮ್ಮದಿ, ಸಮಾಧಾನ ನೀಡುವಷ್ಟು ಉದಾರವಾಗಿದೆ......

ಟ್ಯಾಕ್ಸಿಯನ್ನು ತೆಗೆದುಕೊಂಡು ಮತ್ತೊಂದು ಗಿರಾಕಿ ಹುಡುಕಿ ಹೋಗಬೇಕು ಅನಿಸಲಿಲ್ಲ. ನೇರವಾಗಿ ಮನೆಗೆ ಹೋಗಿ ಈ ಸಂತಸ ಹಂಚಿಕೊಳ್ಳುವ ತವಕ ಹೆಚ್ಚಾಗಿ ಕಾರು ಓಡಿಸಿದೆ.........

*(ಸ್ಫೂರ್ತಿ ಇಂಗ್ಲಿಷ್‌ನ ಒಂದು ಬರಹ – ಆನಂದ್ ಮೂಲಕ ಸಿಕ್ಕಿದ್ದು...)*

# ಸಿದ್ಧತೆ

**- ಸೂರಿ ಹಾರ್ದಳ್ಳಿ**

**ಖಂ**ಡಿತಾ ನೀವು ನನ್ನನ್ನು ಮರೆತಿರುತ್ತೀರಿ. ಅದಕ್ಕೇ ಹೇಳುವುದು, ಮರೆವು ವರ ಅಂತ. ಆಗಾಗ ನನ್ನ ಹೆಸರು ಪತ್ರಿಕೆಗಳಲ್ಲಿ ಕಾಣಿಸಿಕೊಳ್ಳುತ್ತಿದ್ದರೆ ನೀವು ನನ್ನ ಮೇಲಿನ ದ್ವೇಷವನ್ನು ಮರೆಯುವುದಿಲ್ಲ ಎಂದುಕೊಂಡು ನಾನು ತುಂಬಾ ಕಾಲ ಭೂಗತನಾಗಿಯೇ ಉಳಿದಿದ್ದು. ಆದರೆ ಈ ಪ್ರಚಾರದ ಗೀಳಿಗೆ ಅಂಟಿಕೊಳ್ಳುವುದಿದೆಯಲ್ಲ, ಅದರಿಂದ ಹೊರ ಬರುವುದು ಸಾಧ್ಯವಿಲ್ಲ ಎಂಬುದು ನನಗೆ ಈಗ ತಿಳಿವಾಗಿದೆ. ಏನಕೇನ ಪ್ರಕಾರೇಣ ಪ್ರಸಿದ್ಧ ಪುರುಷೋ ಭವ ಎಂಬ ಮಾತಿನಂತೆ ಕೆಟ್ಟವನಾದರೂ ಪರವಾಗಿಲ್ಲ, ಹೆಸರು ಪಡೆಯಬೇಕು, ಎಲ್ಲರೆದುರು ಕಾಣಿಸಿಕೊಳ್ಳಬೇಕು ಎಂದು ಕೊಂಡಿದ್ದೇನೆ.

ಹಾಗಂತ ನಾನು ಐದು ವರ್ಷಗಳಿಗೊಮ್ಮೆ ನಿಮಗೆ ವದನಾರವಿಂದ ದರ್ಶನ ಮಾಡಿಸುವ ರಾಜಕಾರಣಿಗಳ ಹಾಗೆ ಎಂದು ಕೊಳ್ಳಬೇಡಿ. ಅರವಿಂದ ಬೆಳೆಯುವುದು ಕೆಸರಿನಲ್ಲಿ. ರಾಜಕೀಯ ಎಂಬುದು ಒಂದು ಕೆಸರು, ಕೊಚ್ಚೆ. ರಾಜಕಾರಣಿಗಳು ಅಲ್ಲಿಯೇ ಇದ್ದುದರಿಂದ ತಮ್ಮ ಮುಖವು ಕಮಲ ಎಂದು ಕೊಂಡಿದ್ದಾರೆ. ಆದರೆ ನಾನು ಅವರ ಹಾಗಲ್ಲ, ಮರ್ಯಾದಸ್ತ, ಸಿಕ್ಕಾಪಟ್ಟೆ. ಮರ್ಯಾದೆಯನ್ನು ಅಳೆಯಲು ಸಾಧ್ಯವಿಲ್ಲ. ನಮ್ಮ ಮೀಟರ್ ಪಟ್ಟಿಗಳು, ಲೀಟರ್ ಪಾತ್ರೆಗಳು, ತಕ್ಕಡಿ ತೂಗು ಕಲ್ಲುಗಳು ಮರ್ಯಾದೆಯನ್ನು ಅಳೆಯಲಾರವು.

ನೀವು ರಸ್ತೆಯಲ್ಲಿ ಹೋಗುತ್ತಿದ್ದರೆ ಕೆಲವರು ಮುಗುಳ್ನಗೆ ವಿನಿಮಯ ಮಾಡಿದರೆ, ನಮಸ್ಕರಿಸಿದರೆ, ಹಲೋ ಎಂದರೆ ನಿಮಗೊಂದಿಷ್ಟು ಮರ್ಯಾದೆ ಇದೆ ಎಂದು ತಿಳಿದುಕೊಳ್ಳಬೇಕು. ಕಂಡರೂ ಕಾಣದವರಂತೆ ಹೋದರೆ ಅದು 'ಇಲ್ಲ' ಎಂಬರ್ಥ. ಹಾಗಾಗಿ ಈ ಮರ್ಯಾದೆ, ಮಾನ, ಗೌರವಗಳು ಸ್ಕೇಲಿನಿಂದ ಹೊರಕ್ಕೆ. ಇನ್ನೂ ನಾನು ಯಾರೆಂದು ತಿಳಿಯಲಿಲ್ಲವೇ? ನನ್ನ ಪರಿಚಯ ವಿಷದವಾಗಿ ಮಾಡಬೇಕೆಂದರೆ ನಾನು ಕಾಶೀಪತಿಯ ಗೆಳೆಯ. ಕಾಶೀಪತಿ ಯಾರು ಎನ್ನುವಿರಾ?

ನಿಮ್ಮ ನೆನಪಿಗಷ್ಟು ಬೆಂಕಿಹಾಕ... ಕಾಶೀಪತಿ ಮಾದೇವಿಯ ಪತಿ. ಮಾದೇವಿ ಚೆನ್ನಾಗಿ ನಗುತ್ತಾಳೆ, ನಕ್ಕಾಗೆಲ್ಲಾ ಮಲ್ಲಿಗೆ ಅರಳಿದಂತಾಗುತ್ತದೆ ಮತ್ತು ಅವಳು ರುಚಿ ಕಟ್ಟಾದ ಕಾಫಿ ಮಾಡುತ್ತಾಳೆ. ಸುಂದರವಾಗಿ ಬಟ್ಟೆ ತೊಡುತ್ತಾಳೆ. ಅವಳೆಂದರೆ ನನ್ನಾಕೆಗೆ ಅಷ್ಟಕ್ಕಷ್ಟೆ

ನನ್ನ ವಿಷಯ ಈಗ ಆಮೂಲಾಗ್ರವಾಗಿ ತಿಳಿಯಿತಲ್ಲ? ಇದಕ್ಕಿಂತ ಹೆಚ್ಚಿಗೆ ಹೇಳಲು ಏನೂ ಇಲ್ಲ.

ನಮ್ಮ ಹೊಸ ಬಾಸು, ಅಂದರೆ ಕಚೇರಿಯ ಬಾಸು, ಮಾತಾಡುವಾಗೆಲ್ಲ ನಿಮಿಷಕ್ಕೆ ಹತ್ತು ಬಾರಿ ಸ್ಟ್ರಾಟೆಜಿ ಎಂಬ ಪದ ಬಳಸುತ್ತಾನೆ. ನಮ್ಮ ಕೌಶಲ್ಯಗಳನ್ನು, ದೃಷ್ಟಿಕೋನಗಳನ್ನು

(ಕೋಣಗಳನ್ನು) ಬದಲಾಯಿಸಿಕೊಳ್ಳಬೇಕೆಂಬುದು ಅವನ ವಾದ. ಹಾಗಾಗಿ ನಾನೂ ನನ್ನ ಅಭಿಪ್ರಾಯಗಳನ್ನು ಮಾರ್ಪಡಿಸಿಕೊಳ್ಳುತ್ತಿದ್ದೇನೆ.

ಉದಾಹರಣೆಗೆ ನಮ್ಮ ಮನೆಯೆದುರು ಒಣ ಹಾಕಿದ ಹಳೆಯ, ಹರಿದ ಬನಿಯನ್ನೊಂದು ಮೊನ್ನೆ ಕಳವಾಯಿತು. ನಾನು ಬನಿಯನ್ ಕಳೆದದ್ದಕ್ಕಾಗಿ ಶೋಕಿಸಲಿಲ್ಲ; ಬದಲಿಗೆ 'ಎಂತಹ ಬಡತನ ದೇಶದಲ್ಲಿದೆ. ಹರಿದ ಬನಿಯನ್ನುಗಳನ್ನೂ ಕದಿಯುವ ದುರ್ದಶೆ ನಮ್ಮ ದೇಶದ ನಾಗರಿಕರಿಗೆ ಬಂದಿದೆ ಎಂದರೆ ಶೋಚನೀಯ' ಎಂದೇ ವಾದಿಸಿ ಹೆಂಡತಿಯಿಂದ ಬೈಸಿ ಕೊಂಡಿದ್ದೆ. ನನಗೆ ಬನಿಯನ್ ಕಳೆದುದರ ಬಗ್ಗೆ ಇರುವ ಬೇಸರಕ್ಕಿಂತ ಅದನ್ನು ಕಷ್ಟ ಪಟ್ಟು ಒಗೆದ ನಂತರ ಆದ ಕಳ್ಳತನದ ಬಗ್ಗೆ ಹೆಂಡತಿಗೆ ಸಿಟ್ಟಿತ್ತು. ಅದು ಅವಳ ಸ್ಟ್ರಾಟೆಜಿ.

ಕಾರಿನ ಬೆಲೆ ಕಡಿಮೆಯಾಗಿದೆ, ಕಂಪ್ಯೂಟರ್, ಟಿವಿ, ಫ್ರಿಜ್‌ಗಳ ದರ ದಿನೇ ದಿನೇ ಇಳಿಯುತ್ತಿದೆ. ಬೆಂಗಳೂರಿನಲ್ಲಿ ಹೊಸ ವಿಮಾನ ನಿಲ್ದಾಣ ಆಗಿದೆ. ಬೆಂಗಳೂರಿನ ರಸ್ತೆಗಳಲ್ಲಿ ಗಂಟೆಗಟ್ಟಲೆ ಟ್ರಾಫಿಕ್ ಜಾಮ್ ಆಗುತ್ತಿದೆ. ಮಂತ್ರಿಗಳು, ಐ.ಎ.ಎಸ್. ಅಧಿಕಾರಿಗಳು ಕೋಟಿಗಟ್ಟಲೆ ಹಣ ಸಂಪಾದಿಸುತ್ತಿದ್ದಾರೆ. ಹಾಗಿದ್ದೂ ಹರಿದ ಬನಿಯನ್, ಅದೂ ನನ್ನದು, ಕದಿಯುವ ಪರಿಸ್ಥಿತಿಯ ಜನ ಇಲ್ಲಿ ಇದ್ದಾರೆ ಎಂದರೆ ಅದು ದೇಶಕ್ಕೆ ಒಳ್ಳೆಯದನ್ನು ತರುವ ಸೂಚನೆಯಲ್ಲ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಶೋಭೆ ತರುವಂತಹದ್ದೂ ಅಲ್ಲ.

ನನಗೆ ಸಮಾಜವಾದದ ಗುಂಗು ತಲೆಗೇರಿದೆ. ತಿಂಡಿ ತಿನ್ನಲು ಹೋಟೆಲಿಗೆ ಹೋದರೆ ಒಂದೇ ಹೋಟೆಲಿನಲ್ಲಿ ತಿನ್ನುವುದಿಲ್ಲ. ಒಂದರಲ್ಲಿ ಇಡ್ಲಿ, ಇನ್ನೊಂದರಲ್ಲಿ ವಡೆ ತಿನ್ನುತ್ತೇನೆ, ಮತ್ತೊಂದು ಹೋಟೆಲಿನಲ್ಲಿ ಕಾಫಿ ಕುಡಿಯುತ್ತೇನೆ. ಪಾಪ, ಆ ಹೋಟೆಲಿಗರು ಎಷ್ಟೊಂದು ಖರ್ಚು ಮಾಡಿ ಹೋಟೆಲ್ ತೆರೆದಿದ್ದಾರೆ.

ಒಂದರಲ್ಲಿಯೇ ವ್ಯಾಪಾರ ಮಾಡಿದರೆ ಇತರ ಹೋಟೆಲಿನವರಿಗೆ ಅನ್ಯಾಯ ಮಾಡಿದಂತೆ ಆಗುವುದಿಲ್ಲವೇ ಎಂಬುದು ನನ್ನ ಸ್ಟ್ರಾಟೆಜಿ, ಇರಲಿ. ಹಾಗೆಯೇ ಟಿವಿಗಳಲ್ಲಿ ಬರುವ ಜಾಹೀರಾತುಗಳನ್ನು ನೋಡುವುದರಲ್ಲಿ ಕೂಡಾ. ಯಾರಿಗೂ ಅನ್ಯಾಯವಾಗದಂತೆ, ಪೂರ್ವಾಗ್ರಹ ಪೀಡಿತನಾಗದೇ ಆದಷ್ಟು ಹೆಚ್ಚು ಜಾಹೀರಾತುಗಳನ್ನು ನೋಡಲು ಪ್ರಯತ್ನಿಸುತ್ತೇನೆ. ನಾವು ನೋಡಬೇಕೆಂದೇ ತಾನೇ ಅವರು ಅಷ್ಟೊಂದು ಹಣ ಖರ್ಚು ಮಾಡಿ ಜಾಹೀರಾತು ಪ್ರಸಾರಿಸೋದು? ಪ್ರತೀ ಬಾರಿಯೂ ಹೆಂಡತಿಯ ಮುಖ ನೋಡುತ್ತಲೇ ಇರೋಲ್ಲ, ರಸ್ತೆಯಲ್ಲಿ ಹೋಗುವವರ ಸೌಂದರ್ಯ ಆಸ್ವಾದಿಸುತ್ತೇನೆ. ಆ ಹೆಣ್ಣುಗಳು ದುಬಾರಿ ಬೆಲೆಯ ದಿರಿಸು ತೊಟ್ಟು ಹೋಗುವುದು ಎಲ್ಲರೂ ನೋಡಲಿ ಎಂದು ತಾನೇ?

ಈಗ ನಮ್ಮ ಕಾಶೀಪತಿಯ ಬಗ್ಗೆ ಬರೋಣ. ಅಂದು ಸಂಜೆ ಅವನ ಮನೆಗೆ ಹೋಗಿದ್ದೆ. ಕತ್ತೆ ತಪ್ಪಿಸಿಕೊಂಡರೆ ಹಾಳುಗೋಡೆಯ ಹಿಂದೆ ಇರುತ್ತದೆ ಎಂದು ನನ್ನ ಹೆಂಡತಿ ಆಗಾಗ ಹೇಳುತ್ತಾಳೆ. ಅಂದರೆ ನಾನು ಮನೆಯಲ್ಲಿ, ಕಚೇರಿಯಲ್ಲಿ ಇಲ್ಲ ಎಂದರೆ ಕಾಶೀಪತಿಯ ಮನೆಯಲ್ಲಿ ಇದ್ದೇನೆ ಎಂದೇ ಅವಳ ಅಂಬೋಣ. ನನಗೂ ಒಂದು ಥರ ಒಳ್ಳೆಯದೇ ಇದರಿಂದ ಅವಳನ್ನು ಸುಲಭವಾಗಿ ಮೋಸಗೊಳಿಸಬಹುದು!

ಕಾಶಿ, ಅವನ ಹೆಂಡತಿ ಇಬ್ಬರೂ ಸೇರಿಕೊಂಡು ಅವರ ಮಗ ರಾಜುವನ್ನು ತಯಾರು ಮಾಡುತ್ತಿದ್ದರು. ಪುಸ್ತಕಗಳಿರುವ ಚೀಲ ಹೆಗಲಿಗೇರಿಸಿದರು, ಪೆನ್ನು ಸರಿಯಾಗಿ ಬರೆಯುತ್ತಿದೆ ಎಂದು ಖಾತರಿ ಪಡಿಸಿಕೊಂಡರು. ಪರೀಕ್ಷೆಯಲ್ಲಿ ಹೇಗೆ ಹೇಗೆ ಬರೆಯಬೇಕು ಎಂಬುದನ್ನು ವಿವರಿಸಿದರು. ಅಪ್ಪ ಅಮ್ಮರಾಗಿ ಹುಟ್ಟಿದ ಮೇಲೆ ಇದನ್ನೆಲ್ಲಾ ಮಾಡಬೇಕಾದುದು ಅವರ ಕರ್ಮ ಎನ್ನುವವನಂತೆ ನಿರ್ಲಿಪ್ತನಾಗಿ ನಿಂತಿದ್ದ ರಾಜು.

ಈಗಿನ ಮಕ್ಕಳಿಗೆ ಹೆತ್ತವರ ಬಗ್ಗೆ ಗೌರವವಿರೋಲ್ಲ. ನನ್ನ ಕುಟುಂಬದಲ್ಲಿ ಇವರು ಯಾಕೆ ಹುಟ್ಟಿದರೋ, ಎಂದು ಕರುಬುತ್ತಾರೆ. ರಾಜುವುದು ಕೂಡಾ ಹಾಗೇ ಯೋಚಿಸುವ ವಯಸ್ಸು.

ಮಾದೇವಿ ಒಂದು ಬೆಡ್‌ಶೀಟನ್ನು ಚೀಲಕ್ಕೆ ತುಂಬಿದಳು. ಕುಟ್ಟವಲಕ್ಕಿಯ ಪ್ಯಾಕೆಟ್ ಒಂದನ್ನು ಅದರ ಜೊತೆಗೇ ತುರುಕಿದಳು. ಇದನ್ನೆಲ್ಲ ಕಂಡ ನನಗೆ ಇವರು ಮಗನನ್ನು ಪರೀಕ್ಷೆಗೆ ಕರೆದುಕೊಂಡು ಹೋಗುತ್ತಿದ್ದಾರೊ, ಪಿಕ್‌ನಿಕ್‌ಗೋ ತಿಳಿಯಲಿಲ್ಲ.

‘ಏನೋ ಕಾಶಿ, ಎಲ್ಲಿಗೋ ಹೊರಟ ಹಾಗಿದೆ?’ ಕೇಳಿದೆ.

‘ಪರೀಕ್ಷೆಗೆ ರಾಜುನ ಕರೆದುಕೊಂಡು ಹೋಗಬೇಕಿದೆ’ ಎಂದ.

ನಾನು ಕೇಳಿದೆ, ‘ಏನೋ ಕಾಶಿ? ನಾಳೆ ಪರೀಕ್ಷೆ ಅಲ್ಲವೇನೋ? ಈಗಲೇ ಹೊರಡೋ ಸಿದ್ಧತೆ ಮಾಡಿದ ಹಾಗಿದೆ?’ ಎಂದು.

‘ಏಯ್, ನಿನಗೆ ಗೊತ್ತಾಗೋಲ್ಲ ಕಣೋ. ಬೆಂಗಳೂರಿನಲ್ಲಿ ಟ್ರಾಫಿಕ್ ಜಾಮ್ ಎಷ್ಟು ಆಗ್ತಿದೆ ಎಂದರೆ ಕೇವಲ ಎರಡು ಕಿಲೋಮೀಟರ್ ದೂರ ಇರೋ ಶಾಲೆ ಸೇರಲು ನಾಲ್ಕು-ಐದು ಗಂಟೆ ರಸ್ತೆಲೇ ಕಾದಿರಬೇಕಾದ ಸಂದರ್ಭ ಬಂದಿದೆ. ನಾಳೆ ಪರೀಕ್ಷೆ ನೋಡು, ತಡವಾದರೆ ಕಷ್ಟ, ಹಾಗಾಗಿ ತೊಂದರೆ ಆಗದಿರಲಿ ಎಂದು ಹನ್ನೆರಡು ಗಂಟೆಗಳ ಮೊದಲೇ ಹೊರಡುತ್ತಿದ್ದೇವೆ, ಎಂದ.

ಬೆಂಗಳೂರಿನ ರಸ್ತೆಗಳಲ್ಲಿ ಎಲ್ಲಿ ನೋಡಿದರಲ್ಲಿ ವಾಹನಗಳ ಸಾಲು, ಸಾಲು. ಏಕ ಮುಖ ಅಥವಾ ರಸ್ತೆ ವಿಭಜಕಗಳಿರುವಲ್ಲಿ ಒಂದು ವಾಹನ ಕೆಟ್ಟರೆ ಅಥವಾ ಅಪಘಾತವಾದರೆ ಅಥವಾ ರಸ್ತೆ ಹಾಳಾದರೆ ಅಥವಾ ಮರ-ಗಿಡ ಬಿದ್ದರೆ ಅಲ್ಲಿ ದಿನಗಟ್ಟಲೆ ಕಾಯೋ ಪರಿಸ್ಥಿತಿ ಈಗಾಗಲೇ ಬಂದಿದೆ. ಹೀಗಿರುವಾಗ, ಮುಂದೊಂದು ದಿನ ಎರಡು ದಿನಗಳ ಮೊದಲೇ ಹೊರಡಬೇಕಾಗಬಹುದು. ಎಲ್ಲಾ ಮುನ್ನೆಚ್ಚರಿಕೆ, ಎಂದ.

ಕಾಶೀಪತಿಯೂ ಸ್ಟ್ರಾಟೆಜಿ ಪದದ ಅರ್ಥ ತಿಳಿದುಕೊಂಡಿದ್ದಾನೆ.

---

**ಸಮವಯಸ್ಕರು**

ಸರಕಾರಿ ಕಛೇರಿಯಲ್ಲಿ
ಎಲ್ಲರದೂ Percent
Age ಊ